# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಜನವರಿ 30, 2021

ಸಂಪುಟ : 47 ಸಂಚಿಕೆ : 271 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


# ಶೇ.70ರಷ್ಟು ಬೋಧನಾ ಶುಲ್ಕ

## ಕೊರೊನಾ ಹಿನ್ನೆಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಮಿತಿ ಹೇರಿದ ರಾಜ್ಯ ಸರ್ಕಾರ

### ಮೇ 24ರಿಂದ ದ್ವಿತೀಯ ಪಿ.ಯು. ಪರೀಕ್ಷೆ, ಜು.1ರಿಂದ ಮುಂದಿನ ಶೈಕ್ಷಣಿಕ ವರ್ಷಾರಂಭ

ಬೆಂಗಳೂರು, ಜ. 29 - ಕಳೆದ ಶೈಕ್ಷಣಿಕ ವರ್ಷದಲ್ಲಿ ಪಡೆದ ಬೋಧನಾ ಶುಲ್ಕದ ಶೇ. 70ರಷ್ಟನ್ನು ಮಾತ್ರ ಈ ವರ್ಷ ಶಾಲೆಗಳು ಪಡೆಯಬೇಕು ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಇಂದಿಲ್ಲಿ ಪ್ರಕಟಿಸಿದ್ದಾರೆ.

ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ಮೇ 24ರಿಂದ ಜೂನ್ 10ರವರೆಗೆ ನಡೆಸಲು ನಿರ್ಧರಿಸಲಾಗಿದೆ, ಅಲ್ಲದೆ, ಮುಂದಿನ ಶೈಕ್ಷಣಿಕ ವರ್ಷ (2021-22) ಜುಲೈ 1ರಿಂದ ಪ್ರಾರಂಭವಾಗಲಿದೆ ಎಂಬ ವೇಳಾ ಪಟ್ಟಿಯನ್ನೂ ಪ್ರಕಟಿಸಲಾಗಿದೆ.

ಖಾಸಗಿ ಆಡಳಿತ ಮಂಡಳಿ ಹಾಗೂ ಪೋಷಕರ ನಡುವೆ ಶುಲ್ಕ ವಸೂಲಾತಿಗೆ ಸಂಬಂಧಿಸಿದಂತೆ ನಡೆಯುತ್ತಿದ್ದ ಗೊಂದಲಕ್ಕೆ ತೆರೆ ಎಳೆದಿರುವ ಸರ್ಕಾರ, ಕೆಲವು ಕಟ್ಟುನಿಟ್ಟಿನ ಆದೇಶಗಳನ್ನು ಹೊರಡಿಸಿದೆ.

ಕಳೆದ 2019-20ರ ಶೈಕ್ಷಣಿಕ ವರ್ಷದಲ್ಲಿ ಪಡೆದ ಶುಲ್ಕಕ್ಕಿಂತ ಶೇ. 70ರಷ್ಟನ್ನು ಮಾತ್ರ ಈ ವರ್ಷ ಅಂದರೆ 2020-21ರಲ್ಲಿ ಪಡೆಯಬೇಕು ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಚಿವರು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶೇಕಡ 70ಕ್ಕಿಂತ ಹೆಚ್ಚುವರಿ ಶುಲ್ಕವನ್ನು ಶಿಕ್ಷಣ ಸಂಸ್ಥೆಗಳು ಈಗಾಗಲೇ ಸಂಗ್ರಹಿಸಿದ್ದರೆ, ಅದನ್ನು ಮುಂದಿನ ಶೈಕ್ಷಣಿಕ ವರ್ಷಕ್ಕೆ ಹೊಂದಾಣಿಕೆ ಮಾಡಬೇಕು ಎಂದು ಹೇಳಿದರು.

ಈ ಬಾರಿ ಅಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡುವಂತಿಲ್ಲ, ಸರ್ಕಾರದ ಈ ಶುಲ್ಕ ನೀತಿ ರಾಜ್ಯದ ಎಲ್ಲಾ ಮಾದರಿಯ ಶಾಲೆಗಳಿಗೆ ಅನ್ವಯವಾಗಲಿದೆ ಎಂದು ಅವರು ಸ್ಪಷ್ಟಪಡಿಸಿದರು.

ಈ ಬಾರಿಯ ಶುಲ್ಕವನ್ನು ಶಾಲೆಗಳು ಎರಡು ಹಂತಗಳಲ್ಲಿ ಪಡೆಯಲು ಅವಕಾಶ ನೀಡಲಾಗಿದೆ, ಕೊರೊನಾ ಹಿನ್ನೆಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ತರಗತಿಗಳನ್ನು ಹೊರತುಪಡಿಸಿ ಇನ್ನಾವುದೇ ತರಗತಿಗಳು ನಡೆದಿಲ್ಲ. ಸಾಂಕ್ರಾಮಿಕದಿಂದ ಪೋಷಕರಿಗೂ ಆರ್ಥಿಕ ಹಿನ್ನಡೆಯಾಗಿದೆ, ಇದು ಕೇವಲ ರಾಜ್ಯದ ಪರಿಸ್ಥಿತಿಯಷ್ಟೇ ಅಲ್ಲ ಇಡೀ ರಾಷ್ಟ್ರದಲ್ಲೇ ಪರಿಣಾಮ ಬೀರಿದೆ. ಸರ್ಕಾರ ಶುಲ್ಕ ನಿಗದಿಗೂ ಮುನ್ನ ಇದಕ್ಕಾಗಿ ನೇಮಕ ಮಾಡಲಾಗಿದ್ದ ಸಮಿತಿಯ ವರದಿ ಆಧರಿಸಿ ಈ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

ಒಂದು ವೇಳೆ ಗೊಂದಲಗಳಿದ್ದಲ್ಲಿ, ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಸಮಿತಿಗಳನ್ನು ರಚನೆ ಮಾಡಲಾಗುತ್ತದೆ, ಈ ಸಮಿತಿಯ ಮುಂದೆ ಪೋಷಕರು ಮತ್ತು ಶಾಲೆಗಳ ಆಡಳಿತ ಮಂಡಳಿ ಅಹವಾಲು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದರು.

ಬೋಧನಾ ಶುಲ್ಕ ಹೊರತುಪಡಿಸಿ ಶಾಲೆಗಳು ಬೇರಾವುದೇ ಶುಲ್ಕವನ್ನು ಪಡೆಯುವಂತಿಲ್ಲ, ಒಂದು ವೇಳೆ ಈಗಾಗಲೇ ಶುಲ್ಕ ವಸೂಲಿ ಮಾಡಿದ್ದರೆ, ಅದನ್ನೂ ಸಹಾ ಮುಂದಿನ ಶೈಕ್ಷಣಿಕ ವರ್ಷದ ಶುಲ್ಕದಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕು, ಸರ್ಕಾರ (3ನೇ ಪುಟಕ್ಕೆ)



# ನಗರದಲ್ಲಿ ಕೂಡಲ-ಹರಿಹರ ಸಂಗಮ

### ಪಂಚಮಸಾಲಿ 2ಎ ಪಾದಯಾತ್ರೆಗೆ ವಚನಾನಂದ ಶ್ರೀಗಳ ಸೇರ್ಪಡೆ

ದಾವಣಗೆರೆ, ಜ. 29 – ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ನಡೆಸುತ್ತಿರುವ ಬೆಂಗಳೂರಿಗೆ ಪಾದಯಾತ್ರೆಯಲ್ಲಿ ತಾವೂ ಜೊತೆ ಸೇರುವುದಾಗಿ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಶ್ರೀಗಳು ಘೋಷಿಸಿದ್ದಾರೆ.

ನಗರದ ಬೀರಲಿಂಗೇಶ್ವರ ಮೈದಾನದಲ್ಲಿ ಪಾದಯಾತ್ರೆಯ ಅಂಗವಾಗಿ ಆಯೋಜಿಸಲಾಗಿದ್ದ ಬಹಿರಂಗ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದ ಶ್ರೀಗಳು, ಒಂದಾಗಿ ಸಮಾಜದ ರಥ ಎಳೆಯುವ ಸಮಯ ಬಂದಿದೆ. ಬೆಂಗಳೂರಿನವರೆಗೆ ಕೂಡಲ ಸಂಗಮ ಜಗದ್ಗುರುಗಳಿಗೆ ಜೊತೆ ಹೆಜ್ಜೆಗೆ ಹೆಜ್ಜೆ ಕೊಟ್ಟು ಪಾದಯಾತ್ರೆ ನಡೆಸುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಕೂಡಲಸಂಗಮದಿಂದ ಕೈಗೊಂಡಿರುವ ಪಾದ ಯಾತ್ರೆಗೆ ವಚನಾನಂದ ಸ್ವಾಮೀಜಿ ಹರಪನಹಳ್ಳಿ ಯಲ್ಲಿ ಸ್ವಾಗತಿಸಿ ಜೊತೆಯಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಆದರೆ, ಹರಿಹರದ ಸಮಾರಂಭಕ್ಕೆ ಶ್ರೀಗಳು ಬಂದಿರಲಿಲ್ಲ. ನಂತರ ದಾವಣಗೆರೆಯ ವೇದಿಕೆಯಲ್ಲಿ ಜೊತೆಯಾಗಿ ಕಾಣಿಸಿಕೊಂಡಿದ್ದಷ್ಟೇ ಅಲ್ಲದೇ, ಜೊತೆಯಾಗಿ ಪಾದಯಾತ್ರೆ ನಡೆಸುವುದಾಗಿ ಘೋಷಿಸಿದ್ದಾರೆ.

ಕೂಡಲಸಂಗಮದ ಜಗದ್ಗುರುಗಳು ಹಾಗೂ ತಾವು ಹಲವಾರು ವರ್ಷಗಳಿಂದ (4ನೇ ಪುಟಕ್ಕೆ)

# ಡ್ರಗ್ಸ್‌ನಿಂದ 'ಅಡಿಕೆ' ಬಿಡಲು ಕ್ರಮ

### ವೆಬ್‌ಸೈಟ್‌ನಲ್ಲಿ ತಪ್ಪಾಗಿ ಅಡಿಕೆ ಡ್ರಗ್ಸ್ ಎಂದು ಪ್ರಕಟಣೆ : ಸಚಿವ ಬೊಮ್ಮಾಯಿ ಸ್ಪಷ್ಟನೆ

ಬೆಂಗಳೂರು, ಜ.29 - ಡ್ರಗ್ಸ್ ಪಟ್ಟಿಯಿಂದ ಅಡಿಕೆಯನ್ನು ಕೈಬಿಡಲಾಗುವುದು ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ಸ್ಪಷ್ಟಪಡಿಸಿದ್ದಾರೆ.

ಶೂನ್ಯವೇಳೆಯಲ್ಲಿ ಹರತಾಳು ಹಾಲಪ್ಪ, ಆರಗ ಜ್ಞಾನೇಂದ್ರ, ಯು.ಟಿ. ಖಾದರ್, ಎಂ.ಪಿ. ಕುಮಾರಸ್ವಾಮಿ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ವೆಬ್‌ಸೈಟ್‌ನಲ್ಲಿ ತಪ್ಪಾಗಿ ಮುದ್ರಣವಾಗಿದೆ, ಅದನ್ನು ಸರಿಪಡಿಸಲಾಗುವುದು ಎಂದರು. ರೈತರ ಬದುಕು ಕಟ್ಟುವ ಅಡಿಕೆಯನ್ನು ಡ್ರಗ್ಸ್ ಪಟ್ಟಿಗೆ ಸೇರಿಸುವುದಿಲ್ಲ, ಕೆಳಹಂತದ ಅಧಿಕಾರಿಗಳ ಪ್ರಮಾದದಿಂದ ಈ ಸೇರ್ಪಡೆಯಾಗಿತ್ತು, ಇದನ್ನು ಸರಿಪಡಿಸಲಾಗುವುದು ಎಂದರು.

ಇದಕ್ಕೂ ಮುನ್ನ ಅಡಿಕೆಯನ್ನು ಡ್ರಗ್ಸ್ ಪಟ್ಟಿಗೆ ಸೇರಿಸಿರುವುದಕ್ಕೆ ಸದಸ್ಯರಿಂದ (4ನೇ ಪುಟಕ್ಕೆ)


## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ಹಿಂಡಸಘಟ್ಟ ಗ್ರಾಮದ ವಾಸಿ ದಿ. ದೊಡ್ಡಮನೆ ನಾಗಪ್ಪನವರ ದ್ವಿತೀಯ ಪುತ್ರ ಹೆಚ್.ಎನ್. ಮಹಾಬಲೇಶ್ವರಪ್ಪ (ನಿವೃತ್ತ DYSP) ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 22.01.2021 ರಂದು ಶುಕ್ರವಾರ ಸಂಜೆ 6.50ಕ್ಕೆ ನನ್ನ ಧರ್ಮಪತ್ನಿ

**ಶ್ರೀಮತಿ ಎಂ.ಸರೋಜಕುಮಾರಿ**

(ನಿವೃತ್ತ ಶಿಶು ಅಭಿವೃದಿ ಯೋಜನಾಧಿಕಾರಿಗಳು)

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ವೈಕುಂಠ ಸಮಾರಾಧನೆಯನ್ನು**

ದಿನಾಂಕ 31.01.2021ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗೃಹ ಹಿಂಡಸಕಟ್ಟೆ ಗ್ರಾಮ ದಾವಣಗೆರೆ ತಾ|| ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಹೆಚ್.ಎನ್.ಮಹಾಬಲೇಶ್ವರಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು
ಡಾ|| ರಾಘವೇಂದ್ರ ಎಂ. ದೊಡ್ಡಮನಿ ಶ್ರೀಮತಿ ಡಾ|| ತೇಜಸ್ವಿನಿ ಪೂಜಾರ್ ಮತ್ತು ಮಕ್ಕಳು
ವಿಕ್ರಮ್ ದೊಡ್ಡಮನಿ, ಶ್ರೀಮತಿ ಅನುಪ ದೊಡ್ಡಮನಿ ಮತ್ತು ಮಕ್ಕಳು
ಚಿ|| ಆರ್ಯನ್, ಚಿ|| ಆರಾಧ್ಯ, ಚಿ|| ಆಯಿಷಿ
ದೊಡ್ಡಮನಿ ಸಹೋದರರು, ಸಹೋದರಿಯರು ಮತ್ತು ಬಂಧು-ಮಿತ್ರರು.




## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

|| ಶ್ರೀ ಆಂಜನೇಯ ಪ್ರಸನ್ನ ||

ದಾವಣಗೆರೆ ಜಿಲ್ಲೆ, ತಾಲ್ಲೂಕು ಗೋಪನಾಳ್ ಗ್ರಾಮದ, ದಾವಣಗೆರೆ ವಾಸಿ

**ಸಣ್ಣಕಲ್ಲಪ್ಪರ ಡಾ. ಎಸ್.ಕೆ. ಕೆಂಚನಗೌಡ್ರು** ಎಂ.ಎಸ್ಸಿ., (ಅಗ್ರಿ) ಪಿಎಚ್.ಡಿ

ನಿವೃತ್ತ ಪ್ರೊಫೆಸರ್, ಜಿಕೆವಿಕೆ, ಬೆಂಗಳೂರು.

**ಮತ್ತು ಸಹೋದರರು** ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 23.01.2021ನೇ ಶನಿವಾರ ರಾತ್ರಿ 10.30 ಗಂಟೆಗೆ ನಮ್ಮ ಸಹೋದರನಾದ



ಜನನ : 30.06.1943

ಮರಣ : 23.01.2021

**ಶ್ರೀ ಎಸ್.ಕೆ. ಸದಾಶಿವಪ್ಪನವರು** ಎಂ.ಎ.,

ಕಾಂಗ್ರೆಸ್ ಮುಖಂಡರು, ಮಾಜಿ ಅಧ್ಯಕ್ಷರು, ಎಪಿಎಂಸಿ, ದಾವಣಗೆರೆ ಮತ್ತು ಪಿ.ಎಲ್.ಡಿ. ಬ್ಯಾಂಕ್, ದಾವಣಗೆರೆ.

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು

ದಿನಾಂಕ 31.01.2021ನೇ ಭಾನುವಾರ ಬೆಳಿಗ್ಗೆ 10.30 ಕ್ಕೆ

ತರಳಬಾಳು ಸಭಾ ಭವನ (ಮಿನಿ) ಹದಡಿ ರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಲಿಂಗೈಕ್ಯರ ಧರ್ಮಪತ್ನಿ : ಶ್ರೀಮತಿ ಪ್ರೇಮ ಸದಾಶಿವಪ್ಪ
ಪುತ್ರ : ಶ್ರೀ ಡಾ|| ಎಸ್.ಎಸ್. ಪ್ರಕಾಶ್ MD, ಮಕ್ಕಳ ತಜ್ಞರು, ಪ್ರೊಫೆಸರ್, ಜೆಜೆಎಂಎಂಸಿ, ದಾವಣಗೆರೆ.
ಸೊಸೆ : ಶ್ರೀಮತಿ ಡಾ|| ಜಿ.ಯು. ಕವಿತ MD, ಪೆಥಾಲಜಿ, ಪ್ರೊಫೆಸರ್, ಎಸ್‌ಎಸ್‌ಐಎಂಎಸ್ ಮತ್ತು ಮಗಳು
ಪುತ್ರ : ಶ್ರೀ ಎಸ್.ಎಸ್. ಸುರೇಶ್ BE (E&C) ಆಯ್ಕೆ ಶ್ರೇಣಿ ಉಪನ್ಯಾಸಕರು, TSIT Polytechnic, Hubli.
ಸೊಸೆ : ಶ್ರೀಮತಿ ಜಿ.ಪಿ. ಐಶ್ವರ್ಯ ಮತ್ತು ಮಕ್ಕಳು
ಪುತ್ರಿ : ಶ್ರೀಮತಿ ಎಸ್.ಎಸ್. ವನಿತ, ಅಳಿಯ : ಶ್ರೀ ಎಂ. ಕುಮಾರಸ್ವಾಮಿ D.M.E. ಮತ್ತು ಮಕ್ಕಳು
ಸಣ್ಣಕಲ್ಲಪ್ಪರ ವಂಶಸ್ಥರು ಹಾಗೂ ಗೋಪನಾಳ್ ಗ್ರಾಮಸ್ಥರು ಮತ್ತು ಬಂಧು-ಮಿತ್ರರು.

ವಿ.ಸೂ.: ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

ಮೊ . 98452 63020, 93419 40141



## ದಾವಣಗೆರೆಯ ಎಸ್. ಎಸ್. ಜನರಲ್ ಆಸ್ಪತ್ರೆಯಲ್ಲಿ



**ಎಸ್.ಎಸ್. ಕೇರ್ ಟ್ರಸ್ಟ್** ವತಿಯಿಂದ

## ಡಯಾಲಿಸಿಸ್ ಕೇಂದ್ರ ಉದ್ಘಾಟನಾ ಸಮಾರಂಭಕ್ಕೆ ತಮ್ಮೆಲ್ಲರಿಗೂ ಆದರದ ಸ್ವಾಗತ

ದಿನಾಂಕ : 30.01.2021ರ ಶನಿವಾರ, ಸಮಯ : ಸಂಜೆ 5.30 ಕ್ಕೆ, ಸ್ಥಳ : ಎಸ್.ಎಸ್. ಜನರಲ್ ಆಸ್ಪತ್ರೆ, ಕೆ.ಆರ್. ರಸ್ತೆ, ದಾವಣಗೆರೆ – 577 001.

ಉದ್ಘಾಟನೆ :
**ಡಾ|| ಶಾಮನೂರು ಶಿವಶಂಕರಪ್ಪನವರು**
ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ,
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ
ಅಧ್ಯಕ್ಷರು, ಎಸ್.ಎಸ್. ಕೇರ್ ಟ್ರಸ್ಟ್, ದಾವಣಗೆರೆ.

ಬಾಪೂಜಿ ಎಜುಕೇಷನಲ್ ಅಸೋಸಿಯೇಷನ್
2ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ - 577 002.
ಕರ್ನಾಟಕ, ಭಾರತ.
ದೂರವಾಣಿ : 08192-251302, 250654 233550,
ಫ್ಯಾಕ್ಸ್ : 08192-231201, ಇ-ಮೇಲ್ : sscaretrust@gmail.com

ಅಧ್ಯಕ್ಷತೆ :
**ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್**
ಜಂಟಿ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ
ವ್ಯವಸ್ಥಾಪಕ ಟ್ರಸ್ಟಿ
ಎಸ್.ಎಸ್. ಕೇರ್ ಟ್ರಸ್ಟ್, ದಾವಣಗೆರೆ.

Best Wishes from HCL Accurate, Affordable & Fast Hitech Clinical Laboratories

# ಮನವಿಗೆ ಬಗ್ಗದ ಸರ್ಕಾರಕ್ಕೆ ಇನ್ನು ಮುಂದೆ ಆಗ್ರಹದ ಅಸ್ತ್ರ



ಹರಿಹರದ ಪತ್ರಿಕಾಗೋಷ್ಠಿಯಲ್ಲಿ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ

ಹರಿಹರ, ಜ.29- ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲಾತಿ ನೀಡಲು ನನ್ನ ಆಡಳಿತದಲ್ಲಿ ಸಾಧ್ಯವಾಗಲಿಲ್ಲ ಎಂದು ಅವರೇ ನೈತಿಕ ಹೊಣೆ ಹೊತ್ತು ರಾಜೀನಾಮೆ ಪತ್ರವನ್ನು ನೀಡಬೇಕೆ ವಿನಃ ನಮ್ಮ ಪಂಚಮಸಾಲಿ ಸಮಾಜದ ಶಾಸಕರಿಗೆ ರಾಜೀನಾಮೆ ಪತ್ರವನ್ನು ನೀಡಿ ಸರ್ಕಾರವನ್ನು ಉರುಳಿಸುವ ವ್ಯವಸ್ಥೆ ಮಾಡಿ ಎಂದು ನಾವು ಹೇಳುವುದಿಲ್ಲ ಎಂದು ಕೂಡಲ ಸಂಗಮ ಪಂಚಮಸಾಲಿ ಪೀಠಾಧ್ಯಕ್ಷ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿ ಯನ್ನುದ್ದೇಶಿಸಿ ಶ್ರೀಗಳು ಮಾತನಾಡಿದರು.

ನಾವು ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಒಂದು ತಿಂಗಳ ಅವಧಿಯೊಳಗೆ ಸಮಾಜಕ್ಕೆ ಮೀಸಲಾತಿ ದೊರಕಿಸುವ ಭರವಸೆಯನ್ನು ನೀಡಿದ್ದರು. ಆದರೆ, ಈಗ ಮಾತು ತಪ್ಪಿದ್ದಾರೆ. ಹೀಗಾಗಿ ಪಾದಯಾತ್ರೆ ಹೋರಾಟ ಹಮ್ಮಿಕೊಳ್ಳುವ ಅನಿವಾರ್ಯತೆ ಬಂದಿದೆ. ರಾಜ್ಯ ಸರ್ಕಾರ ಪ್ರತಿ ವರ್ಷ ಫೆಬ್ರವರಿ ಮೊದಲು ಅಥವಾ ಎರಡನೇ ವಾರದಲ್ಲಿ ಅಧಿವೇಶನ ನಡೆಸಿಕೊಂಡು ಬಂದಿದೆ. ಆದರೆ ಪಂಚಮಸಾಲಿ ಸಮಾಜದ ಮೀಸಲಾತಿ ಹೋರಾಟ ನೋಡಿ, ಮಾರ್ಚ್ ತಿಂಗಳಲ್ಲಿ ನಡೆಸಲು ತೀರ್ಮಾನಕ್ಕೆ ಬಂದಿದ್ದಾರೆ ಎಂದರೆ ಪಂಚಮಸಾಲಿ ಸಮಾಜದ ಹೋರಾಟದ ಪ್ರಭಾವ ಏನು ಎಂಬುದನ್ನು ಇದು ತೋರಿಸುತ್ತದೆ.

ರಾಜ್ಯದ ಬಹುಸಂಖ್ಯಾತ ಸಮುದಾಯವಾಗಿರುವ ಪಂಚಮಸಾಲಿ ಸಮಾಜದವರು ಹೆಚ್ಚಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಇರುವುದರಿಂದ ಮತ್ತು ರಾಜ್ಯದ ಹಲವಾರು ನಗರಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಇರುವುದರಿಂದ ಯಡಿಯೂರಪ್ಪನವರು ರಾಜ್ಯದ ಮುಖ್ಯಮಂತ್ರಿಗಳಾಗಲು ಸಮಾಜದ ಜನರ ಸಹಕಾರದ ಅಗತ್ಯವಿದ್ದು, ಇದನ್ನು ಅವರು ಮನಗಾಣಬೇಕು. ಇಷ್ಟು ದಿನಗಳ ಕಾಲ ಮನವಿಯನ್ನು ಮಾಡಿಕೊಂಡು ಬಂದಿದ್ದೇವೆ. ಆದರೆ ಸರ್ಕಾರ ಇಲ್ಲಿಯವರೆಗೆ ಸ್ಪಂದಿಸುವ ಕೆಲಸವನ್ನು ಮಾಡದೆ ಇರುವುದರಿಂದ ಇನ್ನು ಮುಂದೆ ಮನವಿ ನೀಡುವುದಿಲ್ಲ. ನಮ್ಮ ಸಮಾಜಕ್ಕೆ ಮೀಸಲಾತಿ ನೀಡಬೇಕು ಎಂದು ಆಗ್ರಹಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್, ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ್, ಪಾದಯಾತ್ರೆ ಸಮಿತಿ ಅಧ್ಯಕ್ಷ ದೀಟೂರು ಶೇಖರಪ್ಪ, ಮಲೇಬೆನ್ನೂರು ಬಿ. ಚಿದಾನಂದಪ್ಪ, ಸಂಚಾಲಕ ಪರಮೇಶ್ವರ ಗೌಡ್ರು, ಉಪಾಧ್ಯಕ್ಷ ಮಿಟ್ಟಲಕಟ್ಟಿ ಚಂದ್ರಪ್ಪ, ಜಿ. ನಂಜಪ್ಪ, ಶಿವಕುಮಾರ್ ಸ್ವಾಮಿ, ಹೆಚ್.ಎಸ್. ಅರವಿಂದ್, ಮಂಜುನಾಥ್ , ತಾ.ಪಂ. ಸದಸ್ಯ ಕೊಟ್ರೇಶಪ್ಪ ಸಿರಿಗೆರೆ, ಬಸವರಾಜ್ ಮಲೇಬೆನ್ನೂರು, ಶಂಕರ್ ಗೌಡ್ರು ಬಿರಾದಾರ, ಗೌಡ್ರು ಪುಟ್ಟಪ್ಪ, ರಾಜು ಇನ್ನಿತರರಿದ್ದರು.

# ಹಮಾಲಿ ಮಾಡಿದ್ದು ನಾವು, ಹೆಚ್ಚು ಖಾತೆ ಕೇಳೋರು ಅವರು



ಬೆಂಗಳೂರು, ಜ.29- ಕೆಲವರು ಎರಡು ಮೂರು ಖಾತೆ ಬೇಕು ಅಂತ ಕುಳಿತಿದ್ದಾರೆ. ಅಂದು ಹಮಾಲಿ ಕೆಲಸ ಮಾಡಿದ್ದು ನಾವು ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ರೇಣುಕಾಚಾರ್ಯ ಕಿಡಿಕಾರಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಸಚಿವ ಸ್ಥಾನ ಕೊಡುವುದು ಗೌರವಕ್ಕಾಗಿ, ದೊಡ್ಡ ಖಾತೆ ಯಾಕೆ ಬೇಕು?. ನಮ್ಮ ಪೂರ್ವಜರು ತೆಂಗಿನ ಮರ ನೆಟ್ಟಿದ್ರು, ಬೇರೆಯವರು ಎಳನೀರು ಕುಡಿಯುತ್ತಿದ್ದಾರೆ ಎಂದು ಪರೋಕ್ಷವಾಗಿ ಸುಧಾಕರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ, ನಾಯಕತ್ವದ ವಿರುದ್ಧ ನಮ್ಮ ಹೋರಾಟ ಅಲ್ಲ. ಕೆಲವರು ಇಂತದ್ದೇ ಖಾತೆ ಬೇಕು ಅಂತ ಕುಳಿತಿದ್ದಾರೆ. ವ್ಯಾಪಾರಕ್ಕಾಗಿ ದೊಡ್ಡ ಸಚಿವ ಸ್ಥಾನ ಬೇಕಾ?. ಮಂತ್ರಿಗಳು ಹಾಗೂ ಸರ್ಕಾರದ ವರ್ಚಸ್ಸು ಕಡಿಮೆಯಾಗಲಿದೆ. ಎಲ್ಲಾ ಸಚಿವರು ಅಂತ ಹೇಳಲ್ಲ, ಕೆಲವರು ಈ ರೀತಿ ಮಾಡ್ತಿದ್ದಾರೆ. ಕೆಲವರು ಬಹಳ ಉದ್ಧಟತನ ಮಾಡ್ತಿದ್ದಾರೆ. ಸರ್ಕಾರ ಅಧಿಕಾರಕ್ಕೆ ಬರಬೇಕು ಅಂತ ಸಂಘಟನೆ ಮಾಡಿತ್ತು. ಅಧಿಕಾರ ಬೇರೆಯವರು ಅನುಭವಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಹಿರಿಯ ಶಾಸಕರು ಸಭೆ ಸೇರಿದ್ದಾರೆನ್ನೋ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ನನ್ನ ನೇತೃತ್ವದಲ್ಲಿ ಅಂತ ಇಲ್ಲ, ನಾವೆಲ್ಲಾ ಸಮಾನ ಮನಸ್ಕರು. ಬಹಳ ಜನ ಬಿಜೆಪಿ ಶಾಸಕರಿದ್ದೇವೆ. ಪಕ್ಷ ಹಾಗೂ ಸಿಎಂಗೆ ಮುಜುಗರ ಆಗಬಾರದು ಅಂತ ಇದ್ದೇವೆ. ಇನ್ನೂ ಎರಡು ವರ್ಷ ಸ್ಥಿರ ಸರ್ಕಾರ ನೀಡಬೇಕು. ಸ್ವಾಭಿಮಾನಕ್ಕೆ ಧಕ್ಕೆ ಬರಬಾರದು, ಬಂದ್ರೆ ಅದರ ವಿರುದ್ಧ ನಿಲ್ಲುತ್ತೇನೆ. ರಾಜ್ಯದಲ್ಲಿ ಉತ್ತಮ ಆಡಳಿತ ನಡೆಸಬೇಕು ಅನ್ನೋ ಅಪೇಕ್ಷೆ ಇದೆ. ಮೊದಲು ರಾಜೀನಾಮೆ ಕೊಟ್ಟು ಬಂದಿದ್ದು ಆನಂದ್ ಸಿಂಗ್. ಅವರಿಗೆ ನಿಮ್ಮ ಪರವಾಗಿ ಇರೋದಾಗಿ ಹೇಳಿದ್ದೆವು ಎಂದು ಸ್ಪಷ್ಟಪಡಿಸಿದರು.

ನನ್ನ ಕ್ಷೇತ್ರ ಜನತೆ ಮೂರು ಬಾರಿ ಗೆಲ್ಲಿಸಿದ್ದಾರೆ. ಅಬಕಾರಿ ಖಾತೆ ಕೊಟ್ಟಾಗ ಉತ್ತಮವಾಗಿ ನಿಭಾಯಿಸಿದೆ. ನನಗೆ ಕಳೆದ ವಾರ ನಡೆದ ಘಟನೆ ನೋವು ತಂದಿದೆ. ಬೇರೆ ಪಕ್ಷದಿಂದ ಬಂದವರನ್ನು ಗೌರವಿಸುತ್ತೇನೆ. ನಾವು ಹಿರಿಯರಲ್ವಾ, ನಮಗಿಂತ ಹಿರಿಯರಿಲ್ವಾ.? ನಾನು ಬಹಿರಂಗವಾಗಿ ಹೇಳಿಕೆ ನೀಡಲ್ಲ. ಸಿಎಂ ಶಾಸಕಾಂಗ ಸಭೆ ಕರೆದಾಗ, ನೇರವಾಗಿ ಅಲ್ಲಿಯೇ ಹೇಳುತ್ತೇನೆ. ರಾಜ್ಯಾಧ್ಯಕ್ಷ ಹಾಗೂ ಮುಖ್ಯಮಂತ್ರಿ ಬಳಿ ಹೇಳುತ್ತೇನೆ ಎಂದು ತಿಳಿಸಿದರು.

ರಾಜ್ಯದಲ್ಲಿ ಉತ್ತಮ ಆಡಳಿತ ನಡೆಸಬೇಕು ಎಂಬ ಅಪೇಕ್ಷೆ ಇದೆ. ಇನ್ನು ಎರಡು ವರ್ಷ ಸ್ಥಿರ ಸರ್ಕಾರನೀಡಬೇಕು. ಹಾಗಾಗಿ ಪಕ್ಷ ಮತ್ತು ಮುಖ್ಯಮಂತ್ರಿಗೆ ಮುಜುಗರ ಆಗಬಾರದು ಎಂದು ಭಾವಿಸಿದ್ದೇವೆ ಎಂದರು.

# ಜನಗಣತಿ ನಂತರ ಗ್ರಾ.ಪಂ.ಗಳು ಮೇಲ್ದರ್ಜೆಗೆ



ಬೆಂಗಳೂರು, ಜ.29 - ಕೇಂದ್ರ ಜನಗಣತಿ ನಿರ್ದೇಶನಾಲಯ ನಡೆಸುತ್ತಿರುವ ಜನಗಣತಿ ಮುಕ್ತಾಯದ ನಂತರ ಇದರ ಆಧಾರದ ಮೇಲೆ ಅರ್ಹ ಗ್ರಾಮ ಪಂಚಾಯ್ತಿಯನ್ನು ಪಟ್ಟಣ ಪಂಚಾಯ್ತಿ ಆಗಿ ಮೇಲ್ದರ್ಜೆಗೇರಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ವಿಧಾನಸಭೆಗೆ ತಿಳಿಸಿದ್ದಾರೆ.

ಜೆಡಿಎಸ್ ಸದಸ್ಯ ಡಾ.ಕೆ.ಶ್ರೀನಿವಾಸ್‌ಮೂರ್ತಿ ಅವರ ಪ್ರಶ್ನೆಗೆ ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜ ಪರವಾಗಿ ಉತ್ತರಿಸಿ ದ ಸಚಿವರು, ಕೇಂದ್ರ ಜನಗ ಣತಿ ನಿರ್ದೇಶನಾಲಯದ ಜನಗಣತಿ ಮುಗಿಯುವವರೆಗೂ ಯಾವುದೇ ಆಡಳಿ ತಾತ್ಮಕ ಗಡಿಗಳನ್ನು ಬದಲಾವಣೆ ಮಾಡದಂತೆ ಆದೇಶ ಹೊರ ಡಿಸಲಾಗಿದೆ, ಆದ್ದರಿಂದ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯತ್‌ಗಳನ್ನಾಗಿ ಮೇಲ್ದರ್ಜೆಗೇರಿಸಲು ಸದ್ಯಕ್ಕೆ ಅವಕಾಶವಿಲ್ಲ, ಕಾಲ ಕಾಲಕ್ಕೆ ಅರ್ಹ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯತ್‌ಗಳಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದರು

# ಉಕ್ಕಡಗಾತ್ರಿ, ಸಿರಿಗೆರೆ, ಬನ್ನಿಕೋಡು, ರಾಜನಹಳ್ಳಿ ಗ್ರಾ.ಪಂ. ಅಧ್ಯಕ್ಷ ಸ್ಥಾನಗಳಿಗೆ ಅವಿರೋಧ ಆಯ್ಕೆ ಖಚಿತ

ಮಲೇಬೆನ್ನೂರು, ಜ.29- ಉಕ್ಕಡಗಾತ್ರಿ, ಹೊಳೆಸಿರಿಗೆರೆ, ಬನ್ನಿಕೋಡು ಮತ್ತು ರಾಜನಹಳ್ಳಿ ಗ್ರಾಪಂಗಳಲ್ಲಿ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗುವುದು ಖಚಿತವಾಗಿದೆ.

ಉಕ್ಕಡಗಾತ್ರಿ ಗ್ರಾಪಂನಲ್ಲಿ ಒಟ್ಟು 12 ಸದಸ್ಯರಿದ್ದು, ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿಗೆ ಮೀಸಲಾಗಿದೆ. ನಂದಿಗುಡಿ ಗ್ರಾಮದ ಕರಿಬಸಪ್ಪ ಬಸಪ್ಪ ಅವರು ಒಬ್ಬರೇ ಪರಿಶಿಷ್ಟ ಜಾತಿಗೆ ಸೇರಿದ ಸದಸ್ಯರಿದ್ದು, ಇವರು ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ. ಉಪಾಧ್ಯಕ್ಷ ಸ್ಥಾನ ಬಿಸಿಎಂ 'ಎ' ಮಹಿಳೆಗೆ ಇದ್ದು, ಇಬ್ಬರು ಮಹಿಳೆಯರು ಇದ್ದಾರೆ.

ಹೊಳೆಸಿರಿಗೆರೆ ಗ್ರಾಪಂ ನಲ್ಲಿ ಒಟ್ಟು 14 ಸದಸ್ಯರಿದ್ದು, ಅಧ್ಯಕ್ಷ ಸ್ಥಾನ ಎಸ್ಟಿ ಮಹಿಳೆಗೆ ಮೀಸಲಾಗಿದೆ. ಕಾವ್ಯ ಮಂಜುನಾಥ್ ಒಬ್ಬರೇ ಎಸ್ಟಿಗೆ ಸೇರಿರುವುದರಿಂದ ಅವರ ಆಯ್ಕೆ ಅವಿರೋಧವಾಗಲಿದೆ.

ಇಲ್ಲಿಯೂ ಉಪಾಧ್ಯಕ್ಷ ಸ್ಥಾನ ಬಿಸಿಎಂ 'ಎ' ಮಹಿಳೆಗೆ ಮೀಸಲಾಗಿದ್ದು, ಇಬ್ಬರು ಬಿಸಿಎಂ 'ಎ' ಮಹಿಳೆಯರಿದ್ದಾರೆ.

ಬನ್ನಿಕೋಡು ಗ್ರಾಪಂ ನಲ್ಲಿ 17 ಜನ ಸದಸ್ಯರಿದ್ದು, ಅಧ್ಯಕ್ಷ ಸ್ಥಾನ ಎಸ್ಟಿ ಮಹಿಳೆಗೆ ಮೀಸಲಾಗಿದೆ. ಎಸ್ಟಿ ಮೀಸಲು ಸ್ಥಾನದಿಂದ ಗ್ರಾಪಂ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದ ರೇಣುಕಮ್ಮ ಹನುಮಂತಪ್ಪ ಕೋಳಿ ಅವರು ಈಗ ಅಧ್ಯಕ್ಷರಾಗಿಯೂ ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ. ಇಲ್ಲಿ ಕೂಡಾ ಎಸ್ಟಿಗೆ ಸೇರಿದ ಮಹಿಳೆ ರೇಣುಕಮ್ಮ ಒಬ್ಬರೇ ಇದ್ದಾರೆ.

ರಾಜನಹಳ್ಳಿ ಗ್ರಾಪಂ ಅಧ್ಯಕ್ಷ ಸ್ಥಾನವೂ ಎಸ್ಟಿಗೆ ಮೀಸಲಾಗಿದ್ದು, ಚೈತ್ರ ಲಂಕೇಶ್ ಅವರು ಒಬ್ಬರೇ ಎಸ್ಟಿ ಸದಸ್ಯರಾಗಿರುವ ಕಾರಣ ಇವರ ಆಯ್ಕೆಯೂ ಅವಿರೋಧವಾಗಿ ಆಗಲಿದೆ.

ಹರಿಹರ ತಾಲ್ಲೂಕಿನಲ್ಲಿ ಒಟ್ಟು 24 ಗ್ರಾಪಂಗಳ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ಬುಧವಾರ ಮೀಸಲಾತಿ ಘೋಷಣೆ ಆದ ನಂತರ ಈ 4 ಗ್ರಾಪಂ ಹೊರತುಪಡಿಸಿ ಉಳಿದ ಗ್ರಾಪಂಗಳಲ್ಲಿ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ ಕಂಡುಬಂದಿದೆ.

ಕೆಲವು ಪಂಚಾಯ್ತಿಗಳಲ್ಲಿ ಈಗಾಗಲೇ ಸದಸ್ಯರನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದಾರೆ.

# ಪಂಚಮಸಾಲಿ ಸಮಾಜದ 12 ಶಾಸಕರಿದ್ದಾರೆ ಎಚ್ಚರ

ದಾವಣಗೆರೆ, ಜ. 30- ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಪಂಚಮಸಾಲಿ ಸಮಾಜದ 12 ಜನ ಶಾಸಕರಿದ್ದಾರೆ. ಅವರು ಮನಸ್ಸು ಮಾಡಿದರೆ ಸರ್ಕಾರವನ್ನೇ ಅಲ್ಲಾಡಿಸಬಲ್ಲರು ಎಂದು ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯನಂದ ಕಾಶಪ್ಪನವರ್ ಹೇಳಿದ್ದಾರೆ.

ತಾಲ್ಲೂಕಿನ ದೊಡ್ಡಬಾತಿ ಗ್ರಾಮದಲ್ಲಿ ಶುಕ್ರವಾರ ನಡೆದ ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಮಹಾಸ್ವಾಮಿಗಳ ಪಾದಯಾತ್ರೆಯ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

ಮುಖ್ಯಮಂತ್ರಿಗಳು ಮುಂದಾಗುವ ಘಟನೆಗಳಿಗೆ ಆಸ್ಪದ ನೀಡದೆ ಕೂಡಲೇ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡುವ ನಿರ್ಧಾರ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಮೀಸಲಾತಿ ನಿರ್ಧಾರ ಪ್ರಕಟಿಸದಿದ್ದರೆ, ನಾಳೆಯಿಂದ ಉಗ್ರ ಹಾಗೂ ಕ್ರಾಂತಿ ರೂಪದ ಹೋರಾಟ ನಡೆಯಲಿದೆ ಎಂದು ಎಚ್ಚರಿಸಿದ ಅವರು, ಪಂಚಮಸಾಲಿಗಳು ಸುಮ್ಮನೆ ಕುಳಿತರೆ ಮೀಸಲಾತಿ ಸಿಗುವುದಿಲ್ಲ. ನಾವೆಲ್ಲರೂ ಸಜ್ಜಾಗಿ ಹೋರಾಡುವ ಮೂಲಕ ಮೀಸಲಾತಿ ಪಡೆಯೋಣ ಎಂದು ಸಮಾಜಕ್ಕೆ ಕರೆ ನೀಡಿದರು.

# ನಗರದಲ್ಲಿ ಇಂದು - ನಾಳೆ ವಿದ್ಯುತ್ ವ್ಯತ್ಯಯ

ಟಿ.ಸಿ ಲೇಔಟ್, ಎಲ್ಐಸಿ ಆಫೀಸ್, ಕೆ.ಆರ್. ರಸ್ತೆ, ಜಗಳೂರು ಬಸ್‌ಸ್ಟಾಪ್, ಅರಳೀಮರ ಸರ್ಕಲ್, ನೂರಾನಿ ಆಟೋ ಸ್ಟ್ಯಾಂಡ್, ವೆಂಕಟೇಶ್ವರ ದೇವಸ್ಥಾನದ ಪಕ್ಕ, ಆನೆಕೊಂಡ ಹೊಸ ಲೇಔಟ್, ಉರ್ದು ಸ್ಕೂಲ್ ಹಿಂಭಾಗ, ಆಜಾದ್ ನಗರ 10 ರಿಂದ 16ನೇ ಕ್ರಾಸ್‌ವರೆಗೆ, ಅಕ್ಸ ಮಸೀದಿ ಹಿಂಭಾಗ, ಬೀಡಿ ಲೇಔಟ್, ಅಜಾದ್ ನಗರ ಪೊಲೀಸ್ ಸ್ಟೇಷನ್, ಹೆಗಡೆ ನಗರ, ರಜಾವುಲ್ಲಾ ಮುಸ್ತಾಫಾ ನಗರ ಸ್ವಲ್ಪ ಭಾಗ, ಅಮ್ಮಜಾನ್, ಬಾಬಾಜಾನ್, ಜೋಗಲ್‌ಬಾಬಾ ಲೇಔಟ್, ಮಾಗನಹಳ್ಳಿ ರಸ್ತೆ ಹಳ್ಳದವರೆಗೆ, ಕೆ.ಆರ್. ರಸ್ತೆ, ಜಗಳೂರು ಬಸ್‌ಸ್ಟ್ಯಾಂಡ್, ಜಗಳೂರು ರಸ್ತೆ ಎಆರ್‌ಬಿ ಮಿಲ್, ಚಾಮರಾಜಪೇಟೆ, ವಾಟರ್ ಟ್ಯಾಂಕ್, ಎಸ್‌ಎಸ್ ಆಸ್ಪತ್ರೆ, ಬೇತೂರ್ ರಸ್ತೆ, ಚರ್ಚ್ ರಸ್ತೆ, ಮುನ್ಸಿಪಲ್ ಕಾಲೇಜ್, ಕೊಹಿನೂರ್ ಹೋಟೆಲ್ ಹಿಂಭಾಗ, ಹಾಸಬಾವಿ ಸರ್ಕಲ್, ಮಿಲ್ಲತ್ ಸ್ಕೂಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ರೆಹಮಾನ್ ರಸ್ತೆ, ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ, ರಿಂಗ್‌ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್‌ಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟಸ್ (ಬೇತೂರ್ ರಸ್ತೆ) ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ ರಸ್ತೆ, ಕೆ.ಆರ್. ರಸ್ತೆ, ಗಡಿಯಾರ ಕಂಬ, ಬಿ.ಟಿ. ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್ ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮಿ ರಸ್ತೆ ಸ್ವಲ್ಪ ಭಾಗ, ವಸಂತ ಟಾಕೀಸ್ ಸ್ವಲ್ಪ ಭಾಗ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಮತ್ತು ನಾಳೆ ಭಾನುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಸಾಹಿತ್ಯ ಅಕಾಡೆಮಿಯಿಂದ ವಿಜ್ಞಾನ ಸಾಹಿತ್ಯ ಕಮ್ಮಟ

ದಾವಣಗೆರೆ, ಜ.29- ಕರ್ನಾಟಕ ಸಾಹಿತ್ಯ ಅಕಾಡೆಮಿಯು ವಿಜ್ಞಾನ ಸಾಹಿತ್ಯ ಎಂಬ ರಾಜ್ಯಮಟ್ಟದ 3 ದಿನಗಳ ಕಮ್ಮಟವು ಬರುವ ಫೆಬ್ರವರಿ 19 ರಿಂದ 21 ರವರೆಗೆ ಮಂಗಳೂರಿನ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಇವರ ಸಹಯೋಗದೊಂದಿಗೆ ಮಂಗಳೂರಿನ ಪಿಲಿಕುಳ ಇಲ್ಲಿ ನಡೆಯಲಿದ್ದು, ಅರ್ಜಿ ಆಹ್ವಾನಿಸಲಾಗಿದೆ.

ರಾಜ್ಯದ ಎಲ್ಲ ಭಾಗದ 20 ರಿಂದ 45 ವರ್ಷ ವಯೋಮಾನದೊಳಗಿನ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ನಾಡಿದ್ದು ದಿನಾಂಕ 30 ಕೊನೆಯ ದಿನವಾಗಿರುತ್ತದೆ. ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್ http://karnatakasahithyaacademy.org ಇಂದ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದೆಂದು ರಿಜಿಸ್ಟ್ರಾರ್ ಕರಿಯಪ್ಪ ತಿಳಿಸಿದ್ದಾರೆ.

# ಹಿರೇತೊಗಲೇರಿ ಸಣ್ಣಗೌಡ್ರು ಲಿಂಗರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ಜಮೀನ್ದಾರರಾದ
**ಶ್ರೀ ಸಣ್ಣಗೌಡ್ರು ಲಿಂಗರಾಜಪ್ಪ** ಅವರು
ದಿನಾಂಕ 29.01.2021ರ ಶುಕ್ರವಾರ ಸಂಜೆ 5 ಗಂಟೆಗೆ
ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 78 ವರ್ಷ ವಯಸ್ಸಾಗಿತ್ತು.
ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು,
ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು
ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.01.2021ರ
ಶನಿವಾರ ಬೆಳಿಗ್ಗೆ 10 ಗಂಟೆಗೆ ಹಿರೇತೊಗಲೇರಿ ಗ್ರಾಮದಲ್ಲಿರುವ
ದಿವಂಗತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಎಸ್.ಜಿ. ಕರಿಬಸಪ್ಪ ಮತ್ತು ಮಕ್ಕಳು,**
**ಮೊ. 7892440199, 9739736782**

# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 28.01.2021ರಂದು ನಿಧನರಾದ
ದಾವಣಗೆರೆ ಅಕ್ಕಿ ವರ್ತಕರಾಗಿದ್ದ, ನಮ್ಮ ಬಂಧುಗಳಾದ ದಿ|| ಶ್ರೀ ರಾಮನಗೌಡ್ರು ಇವರ ಮಗ
ಶ್ರೀ ಅಮರೇಶ್ವರ ಟ್ರೇಡಿಂಗ್ ಕಂಪನಿ ಮಾಲೀಕರಾದ

**ಶ್ರೀ ಬಳಗನೂರು ವೀರಸಂಗಪ್ಪ (ರಾಜು)**

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು
ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು
ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ✦ ಶ್ರೀಮತಿ ಗಿರಿಜಮ್ಮ, ಶ್ರೀ ಟಿ. ಶಂಕರಪ್ಪ, ಮೋತಿ ಸೈಕಲ್ ಮಾರ್ಟ್, ದಾವಣಗೆರೆ.
- ✦ ಶ್ರೀಮತಿ ಅಮೃತ, ಶ್ರೀ ಶಿವನಗೌಡ ಬಿ., ದಿ ದಾವಣಗೆರೆ-ಹರಿಹರ ಅರ್ಬನ್ ಕೋ-ಆಪ್. ಬ್ಯಾಂಕ್, ದಾವಣಗೆರೆ.
- ✦ ಶ್ರೀಮತಿ ವಿಜಯಲಕ್ಷ್ಮಿ, ಶ್ರೀ ಶ್ರೀಶೈಲ ಬಿ.ಬಿ., ಮೋತಿ ಸೈಕಲ್ ಮಾರ್ಟ್, ದಾವಣಗೆರೆ.
- ✦ ಶ್ರೀಮತಿ ಪ್ರತಿಭಾ ದಿ|| ಟಿ.ಎಸ್. ಬಕ್ಕೇಶ್, ಮೋತಿ ಸೈಕಲ್ ಮಾರ್ಟ್, ದಾವಣಗೆರೆ.
- ✦ ಶ್ರೀಮತಿ ಸವಿತಾ, ಶ್ರೀ ಜಿ. ವೀರಣ್ಣ, ಮೋತಿ ಸೈಕಲ್ ಮಾರ್ಟ್, ದಾವಣಗೆರೆ.

# ಭದ್ರಾ ನಾಲೆಗೆ ಬಿದ್ದು ತಾಯಿ-ಮಕ್ಕಳಿಬ್ಬರು ಆತ್ಮಹತ್ಯೆ

ದಾವಣಗೆರೆ, ಜ.29- ಮಗಳ ವಿವಾಹ ವಿಚಾರದಲ್ಲಿನ ಕೌಟುಂಬಿಕ ಕಲಹದಿಂದ ಬೇಸತ್ತು ತಾಯಿ, ಮಗಳು ಮತ್ತು ಮಗ ಸೇರಿ ಒಂದೇ ಕುಟುಂಬದ ಮೂವರು ಚನ್ನಗಿರಿ ತಾಲ್ಲೂಕಿನ ಸೂಳೆಕೆರೆಯ ಭದ್ರಾ ನಾಲೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಹೃದಯ ವಿದ್ರಾವಕ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಚನ್ನಗಿರಿ ಸಮೀಪದ ಮರವಂಜಿ ಗ್ರಾಮದ ವಾಸಿ ನಿವೃತ್ತ ಶಿಕ್ಷಕ ರಾಜಪ್ಪ ಅವರ ಪತ್ನಿ ಕಮಲಮ್ಮ (50) ಮಗಳು ಶ್ರುತಿ (24) ಹಾಗೂ ಮಗ ಸಂಜಯ್ (20) ನಾಲೆಗೆ ಹಾರಿ ಸಾವಿಗೆ ಶರಣಾದ ದುರ್ದೈವಿಗಳು. ರಾಜ್ಯಶಾಸ್ತ್ರದಲ್ಲಿ ಎಂ.ಎ ಸ್ನಾತಕೋತ್ತರ ಪದವಿ ಮುಗಿಸಿದ್ದ ಮಗಳು ಶ್ರುತಿ ಅವರ ಮದುವೆಗೆ ತಂದೆ ರಾಜಪ್ಪ ವರನನ್ನು ಹುಡುಕುತ್ತಿದ್ದರು. ಆದರೆ, ಶ್ರುತಿ ಬಂದ ಎಲ್ಲ ಸಂಬಂಧಗಳನ್ನು ನಿರಾಕರಿಸುತ್ತಿದ್ದ ಹಿನ್ನೆಲೆಯಲ್ಲಿ ಕುಟುಂಬದಲ್ಲಿ ಮನಸ್ತಾಪ ಉಂಟಾಗುತ್ತಿತ್ತು ಎನ್ನಲಾಗಿದೆ. ಇದರಿಂದ ನೊಂದ ತಾಯಿ, ಮಗಳು ಬುಧವಾರ ಮನೆಯಿಂದ ನಾಪತ್ತೆಯಾಗಿದ್ದರು. ಇವರನ್ನು ಹುಡುಕುತ್ತಾ ಬಂದ ಮಗ ಕೂಡ ಆತ್ಮಹತ್ಯೆಗೆ ಶರಣಾಗಿದ್ದಾನೆ.

ಸಂಜಯ್ ಎಂಜಿನಿಯರಿಂಗ್ ಪದವಿ ಪಡೆದಿದ್ದರು. ಶ್ರುತಿ ಅವರ ಮೃತ ದೇಹ ಗುರುವಾರ ಸಂತೇಬೆನ್ನೂರು ಸಮೀಪದ ಮೆದಿಕೆರೆ ಬಳಿ ಪತ್ತೆಯಾಗಿದೆ.

ಸಂಜಯ್ ಅವರ ಮೃತ ದೇಹ ಶುಕ್ರವಾರ ಯಕ್ಕೆಗೊಂದಿ ಭದ್ರಾ ನಾಲೆಯಲ್ಲಿ ಸಿಕ್ಕಿದೆ. ಕಮಲಮ್ಮ ಅವರ ಮೃತ ದೇಹಕ್ಕಾಗಿ ಶೋಧ ನಡೆಯುತ್ತಿದೆ. ಈ ಸಂಬಂಧ ಸಂತೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಏಳನೇ ವರ್ಷದ ಚಿರಸ್ಮರಣೆ



**ದಿ. ಶ್ರೀ ಬಳ್ಳೇಕಟ್ಟೆ ಚಂದ್ರಪ್ಪ**
ವಿಜಯ ಬ್ಯಾಂಕ್ ನಿವೃತ್ತ ನೌಕರರು

ನೀವು ನಮ್ಮನ್ನಗಲಿ
ಇಂದಿಗೆ ಏಳು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ, ನೀವು
ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ನಾಗರತ್ನಮ್ಮ ಚಂದ್ರಪ್ಪ
ಶ್ರೀಮತಿ ಶ್ರೀ ಹೇಮಾವತಿ ಎ.ಜೆ. ಸಂತೋಷ್ ಕುಮಾರ್
ಶ್ರೀಮತಿ ಶ್ರೀ ಸವಿತಾ ಬಿ.ಸಿ. ಡಾ|| ಶಿವಯೋಗಿ ಎಲಿ
ಚಿ|| ಕಲ್ಪದ್ರುವ, ಚಿ|| ಯುವರಾಜ್ ಎಲಿ
ಲೋಕಿಕೆರೆ, ತ್ಯಾವಣಿಗೆ ವಂಶಸ್ಥರು, ಬಳ್ಳೇಕಟ್ಟೆ ನಾರಜ್ಜಿ ವಂಶಸ್ಥರು
ಸಂದೀಪ್ ಸಿ.ಯು. ವಿಜಯ ಬ್ಯಾಂಕ್ -
ವಿಜಯ ಬಳಗದ ಸ್ನೇಹಿತರು, ಬಂಧು - ಮಿತ್ರರು

# ಕೋಡಿಯಾಲ ಹೊಸಪೇಟೆ ಗ್ರಾ.ಪಂ ಅಧ್ಯಕ್ಷರಾಗಿ ಚೇತನ ಪೂಜಾರ್, ಉಪಾಧ್ಯಕ್ಷರಾಗಿ ರೂಪಾ ಕರೂರ್



ಹರಿಹರ, ಜ.29- ನಗರದ ಹೊರವಲಯದ ಕೋಡಿಯಾಲ ಹೊಸಪೇಟೆ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಚೇತನ ಮಂಜಪ್ಪ ಪೂಜಾರ್ ಹಾಗೂ ಉಪಾಧ್ಯಕ್ಷರಾಗಿ ರೂಪಾ ಮಂಜಪ್ಪ ಕರೂರು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ಈ ಸಂದರ್ಭದಲ್ಲಿ ನಾಗರಾಜ್ ಎಂಎಂಪಿ, ನಾಗರಾಜ್ ಹಳ್ಳೆಳ್ಳಪ್ಪನವರ್, ಮುತ್ತಪ್ಪ ಪೂಜಾರ್, ವಾಗೀಶ್, ಪ್ರಭು ಪೂಜಾರ್, ಅಂಬಿಗರ ಕಾಳಪ್ಪ, ಮಂಜುನಾಥ್ ಶಿವಮೊಗ್ಗ, ದಿನೇಶ್ ಹಳ್ಳೆಳ್ಳಪ್ಪನವರ್, ಅನೂಪ್ ಪೂಜಾರ್, ಕೊಟ್ರೇಶಪ್ಪ ಕಂಚಿಕೇರಿ, ಮಹೇಶಪ್ಪ ಕಂಚಿಕೇರಿ, ಷಣ್ಮುಖ ಸಿ.ಹೆಚ್.ಪಿ, ವಿಜಯಕುಮಾರ್ ನಲವಾಗಿಲು, ಪ್ರಕಾಶ್ ಪೂಜಾರ್, ಕರಿಬಸಪ್ಪ ಕಂಚಿಕೇರಿ ಹರಿಹರ, ಅಣ್ಣಪ್ಪ ಪೂಜಾರ್, ದುಂಡೆಪ್ಪ ಪೂಜಾರ್, ಮನೋಜ್ ಪೂಜಾರ್, ಹನುಮಂತಪ್ಪ ಪೂಜಾರ್, ಕೊಟ್ರೇಶಪ್ಪ ಪೂಜಾರ್, ಪುಟ್ಟರಾಜ್ ಪೂಜಾರ್, ಪ್ರವೀಣ್ ಕರಡೆಪ್ಪನವರ್, ಜಗದೀಶ್ ಪೂಜಾರ್, ಗುರುಪ್ರಸಾದ್ ಆನ್ವೇರಿ, ಮಹಾತೇಶಪ್ಪ ಆನ್ವೇರಿ, ಕೊಟ್ರೇಶ್, ಚೆನ್ನಪ್ಪ , ತಾಪಂ ಸದಸ್ಯ ಗೋಣಪ್ಪ ನಾಗರಾಜ್ ಇಟ್ಟಿಗಿ ಮತ್ತಿತರರು ಹಾಜರಿದ್ದರು.

# ಬೆಂಕಿ ಆಕಸ್ಮಿಕ : ಹರಪನಹಳ್ಳಿಯಲ್ಲಿ ಬಣವೆ ಭಸ್ಮ

ಹರಪನಹಳ್ಳಿ, ಜ.29- ಆಕಸ್ಮಿಕ ಬೆಂಕಿ ಬಿದ್ದು ಹೊಲದಲ್ಲಿದ್ದ ಮೇವಿನ ಬಣವಿಗಳು ಸುಟ್ಟು ಭಸ್ಮವಾದ ಘಟನೆ ತಾಲ್ಲೂಕಿನ ತೊಗರಿಕಟ್ಟೆ ಗ್ರಾಮದ ವ್ಯಾಪ್ತಿಯಲ್ಲಿ ಜರುಗಿದೆ.

ಗ್ರಾಮದ ಪಕ್ಕದಲ್ಲಿರುವ ಅರಣ್ಯದ ಒಣಹುಲ್ಲಿಗೆ ತಗುಲಿದ್ದ ಬೆಂಕಿ ಗಾಳಿಯಿಂದಾಗಿ ಪಕ್ಕದ ಬಾರ್ಕಿ ನಾಗರಾಜಪ್ಪನವರ ಹೊಲದಲ್ಲಿನ ಬಣವೆಗೆ ತಗುಲಿದ್ದು, ಮೆಕ್ಕೆಜೋಳ ಹಾಗೂ ಊಟದ ಜೋಳದ ಮೇವಿನ ಬಣವಿ ಸುಟ್ಟುಹೋಗಿದೆ. ಬಾರ್ಕಿ ಯುವರಾಜನಿಗೆ ಸೇರಿದ ರಾಗಿ ಹುಲ್ಲು, ಈಡಿಗರ ಶಂಕ್ರಪ್ಪನಿಗೆ ಸೇರಿದ ತೊಗರಿಬೆಳೆ ಹಾಗೂ ಗಾಯಿತ್ರಮ್ಮನಿಗೆ ಸೇರಿದ ರಾಗಿ ಬಣವಿ ಸುಟ್ಟು ಭಸ್ಮವಾಗಿದೆ. ಅಗ್ನಿಶಾಮಕ ದಳದ ಮುನಿಸ್ವಾಮಿ ನೇತೃತ್ವದಲ್ಲಿ ಬೆಂಕಿ ನಂದಿಸುವ ಕಾರ್ಯಾಚರಣೆ ಯಶಸ್ವಿಯಾಗಿದೆ.

## ಲಿಂಗದಳ್ಳೇರ ಗಣೇಶಪ್ಪ ನಿಧನ



ಹೊನ್ನಾಳಿ ತಾಲ್ಲೂಕು ಕೂಲಂಬಿ ಗ್ರಾಮದ ವಾಸಿ ಲಿಂಗದಳ್ಳೇರ ಗಣೇಶಪ್ಪ (85) ಅವರು ದಿನಾಂಕ 29.01.2021 ರಂದು ಶುಕ್ರವಾರ ಮಧ್ಯಾಹ್ನ 3.50ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರಿ, ಮೊಮ್ಮಗಳು, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.1.2021 ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಕೂಲಂಬಿ ಗ್ರಾಮದಲ್ಲಿ ನೆರವೇರಲಿದೆ.

## ಆರ್. ವಸಂತಕುಮಾರ್ ನಿಧನ



ದಾವಣಗೆರೆ ಮುದ್ದಳ್ಳಿ ಕಾಂಪೌಂಡ್ ರಾಮಕೃಷ್ಣ ನರ್ಸಿಂಗ್ ಹೋಂ ಹಿಂಭಾಗ #868/8A ಗಣೇಶ ನಿಲಯದ ವಾಸಿಯಾದ ದಿ ಎಸ್.ರಾಜಣ್ಣ ಇವರ ಪುತ್ರ ಆರ್.ವಸಂತಕುಮಾರ್ (60) ಅವರು ದಿನಾಂಕ 29.01.2021 ರಂದು ಶುಕ್ರವಾರ ಮಧ್ಯಾಹ್ನ 1.45ಕ್ಕೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನಿ ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.01.2021 ರಂದು ಶನಿವಾರ ಬೆಳಿಗ್ಗೆ 9.30ಕ್ಕೆ ನಗರದ ಲೇಬರ್ ಕಾಲೋನಿಯ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

# ಚನ್ನಗಿರಿ ತಾಲ್ಲೂಕಿಗಿಂದು ಸಂಸದರ ಭೇಟಿ

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಗ್ಗೆ 11.30 ಗಂಟೆಗೆ ಚನ್ನಗಿರಿ ತಾಲ್ಲೂಕಿನ ಹಿರೇಕೋಗಲೂರು ಗ್ರಾಮದಲ್ಲಿ ಕರುಗಳ ಪ್ರದರ್ಶನ ಮತ್ತು ಬರಡು ರಾಸು ಚಿಕಿತ್ಸಾ ಶಿಬಿರದಲ್ಲಿ ಪಾಲ್ಗೊಳ್ಳುವರು.

ಮಧ್ಯಾಹ್ನ 12.30 ಗಂಟೆಗೆ ಚನ್ನಗಿರಿ ತಾಲ್ಲೂಕಿನ ಗಂಗೂರು ಗ್ರಾಮದಲ್ಲಿ ಜಲ್ ಜೀವನ್ ಮಿಷನ್ ಯೋಜನೆಯಡಿ 'ಮನೆ ಮನೆಗೆ ಗಂಗೆ' ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

# ಸತ್ಯ, ಶಾಂತಿ, ಸಮಾನತೆ ಸಾರಿದ ಗಾಂಧೀಜಿ

**'ಅಹಿಂಸೆ ನನ್ನ ದೇವರು. ಸತ್ಯ ನನ್ನ ದೇವರು. ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತದೆ. 'ನನ್ನ ಮೂಲಕವೇ ಅದರ ಸಿದ್ಧಿ'. ಸತ್ಯದ ಸಾಧನೆಯಲ್ಲಿ ಅಹಿಂಸೆ ಹೇಳುತ್ತದೆ. 'ನನ್ನ ಮೂಲಕವೇ ಅದರ ಸಿದ್ಧಿ'**

ಗಾಂಧೀಜಿ ಹುತಾತ್ಮರಾದ ಜನವರಿ 30ನ್ನು ಗಾಂಧೀಜಿಗೆ ಪ್ರಿಯವಾದ ಮದ್ಯ ಹಾಗೂ ತಂಬಾಕು ನಿಷೇಧದ ದಿನವನ್ನಾಗಿಯೂ ಹಾಗೂ ಸತ್ಯ, ಅಹಿಂಸೆಗಳನ್ನೇ ಅಸ್ತ್ರ ಮಾಡಿಕೊಂಡು ವಿಶ್ವದ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ಬಂದೂಕು, ಹಿಂಸೆಗಳಿಲ್ಲದೆ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಗಾಂಧೀಜಿಯೂ ಗೋಡ್ಸೆಯಿಂದ ಬಂದೂಕಿನ ಹಿಂಸೆಯಿಂದಲೇ ದುರ್ಮರಣವೂ ಆದ ದಿವಸ.

ಗಾಂಧಿಯವರು ಮದ್ಯಪಾನ ಮತ್ತು ತಂಬಾಕು ಸೇವನೆಯನ್ನು ತೀವ್ರವಾಗಿ ಖಂಡಿಸುತ್ತಿದ್ದರು. ಸಂಪೂರ್ಣ ಇಂದ್ರಿಯ ನಿಗ್ರಹವನ್ನು ಹೊಂದಿರಬೇಕು ಎನ್ನುವ ನಿಲುವನ್ನು ಹೊಂದಿದ್ದರು. ಅವರು ಹೇಳಿದಂತೆ ಮದ್ಯಪಾನ (ಡ್ರಿಂಕ್ಸ್, ಡ್ರಗ್ಸ್, ಟೊಬ್ಯಾಕೋ) ಮುಕ್ತವಾದಾಗ ಮಾತ್ರ ಭಾರತ ಸಂಪೂರ್ಣ ಸ್ವರಾಜ್ಯವಾದಂತೆ ಎಂದು ಘೋಷಿಸಿದ್ದರು. ಬೆಂಕಿ ದೇಹವನ್ನು ನಾಶ ಮಾಡಿದರೆ, ಮದ್ಯ ಮತ್ತು ಮಾದಕ ವಸ್ತು ದೇಹ ಮತ್ತು ಆತ್ಮ ಎರಡನ್ನೂ ನಾಶ ಮಾಡುತ್ತದೆ ಎಂದರು. ಡಿಡಿಟಿ ವ್ಯಸನಿಗಳು ಸಾಧ್ಯವಾದಷ್ಟು ಬೇಗ ಈ ಶಾಪದಿಂದ ಹೊರಬರಬೇಕು. ದೇಶಾದ್ಯಂತ ಮದ್ಯಪಾನದ ವಿರುದ್ಧ ಜನಜಾಗೃತಿ ಮೂಡಿಸಿ, ನಿರಂತರ ಹೋರಾಟ ನಡೆಸುವುದರಿಂದ ಮದ್ಯಪಾನ ಮುಕ್ತ ದೇಶ ಮಾಡಲು ಸಾಧ್ಯ ಎಂಬುದು ಗಾಂಧೀಜಿಯವರ ಅಭಿಲಾಷೆಯಾಗಿದೆ. ಈ ಕೆಡುಕಿನ ವಿರುದ್ಧ ಎಲ್ಲರೂ ಮತ್ತೊಮ್ಮೆ ಧ್ವನಿ ಎತ್ತಬೇಕಾಗಿದೆ. 'ಒಂದು ದೇಶವನ್ನು ಸಂಪೂರ್ಣ ನಾಶ ಮಾಡಲು ಅಣುಬಾಂಬ್, ನ್ಯೂಕ್ಲಿಯರ್ ಮಿಸೈಲ್, ಶತ್ರು ರಾಷ್ಟ್ರ ಯಾವುದೂ ಬೇಕಿಲ್ಲ. ಆ ದೇಶದ ಯುವ ಜನತೆಯನ್ನು ದುಶ್ಚಟಗಳ ದಾಸರನ್ನಾಗಿ ಮಾಡಿದರಷ್ಟೇ ಸಾಕು. ಯುವಕರ ನಾಶದಿಂದ ಆ



ನಾಡು ಅನಾಥ ಮಕ್ಕಳ, ವಿಧವೆಯರ, ಮುದುಕರ ಕೊಂಪೆಯಾಗುತ್ತದೆ ಎನ್ನುವುದು ಸಂಪೂರ್ಣ ಸತ್ಯ. ಇತ್ತೀಚಿನ ದಿನಗಳಲ್ಲಿ ಯುವಕರು ಡಿಡಿಟಿ ದಾಸರಾಗಿ ಜೀವನ ಮೌಲ್ಯಗಳನ್ನೇ ಮರೆತಿದ್ದಾರೆ.

- ಶಿವನಕೆರೆ ಬಸವಲಿಂಗಪ್ಪ
ಕರುಣಾ ಜೀವ ಕಲ್ಯಾಣ ಟ್ರಸ್ಟ್, ದಾವಣಗೆರೆ.
karunatrustdvg@gmail.com

ಗಾಂಧೀಜಿಯವರು ಯಾವುದನ್ನೇ ಸಾಧಿಸಲು ಹಿಂಸೆಯ ಮಾರ್ಗ ಸರ್ವಥಾಸಲ್ಲ. ಅಹಿಂಸಾ ಮಾರ್ಗವೇ ಸ್ವಾತಂತ್ರ್ಯದ ನಿಜವಾದ ಮಾರ್ಗ ಹಾಗೂ ಅಹಿಂಸೆಯಿಂದಲೇ ಜೀವನದ ಗುರಿಯನ್ನು ಸಾಧಿಸಬೇಕು ಎನ್ನುವ ನಂಬಿಕೆ ಹೊಂದಿದ್ದರು. ತಮ್ಮ ಈ ಧೋರಣೆಗಳನ್ನು ತಮ್ಮ ಎಲ್ಲಾ ಕೆಲಸ ಕಾರ್ಯಗಳಲ್ಲಿ, ಕ್ಷೇತ್ರಗಳಲ್ಲಿ ಅಳವಡಿಸಿಕೊಂಡಿದ್ದರು. ಅದರ ಪರಿಣಾಮವಾಗಿಯೇ ಅವರು ಒತ್ತಡ ರಹಿತವಾದ ನಗುವಿನ ಉಲ್ಲಾಸ, ಶಾಂತಿಯುತವಾದ ವರ್ತನೆಯ ನಿತ್ಯಜೀವನ ನಡೆಸುತ್ತಿದ್ದರು. 'ನನಗೆ ಸತ್ಯವೊಂದೇ ಸಾರ್ವಭೌಮವಾದ ತತ್ವ. ಉಳಿದೆಲ್ಲವೂ ಅದರಲ್ಲೇ ಸೇರಿವೆ' ಎಂದಿದ್ದಾರೆ. 'ನೀತಿಯ ತಳಹದಿಯ ಮೇಲೆ ಈ ಸೃಷ್ಟಿ ನಿಂತಿದೆ. ಸತ್ಯದಲ್ಲಿ ನೀತಿ ಒಳಗೊಂಡಿದೆ ಎಂದು ಚೆನ್ನಾಗಿ ಅರಿತೆ. ಸತ್ಯೋಪಾಸನೆಯೇ ನನ್ನ ಮುಖ್ಯ ಗುರಿಯಾಯಿತು. ಅದರ ಅಂತರಾರ್ಥ ವಿಸ್ತಾರವಾಗುತ್ತಲೇ ಸಾಗಿದೆ' ಅಹಿಂಸೆ ಎನ್ನುವುದು ಭಕ್ತಿ. ಯಾವ ಜೀವಿಯನ್ನೂ (4ನೇ ಪುಟಕ್ಕೆ)

*** ನೀತಿಯಿಲ್ಲದ ವ್ಯಾಪಾರ (ವಾಣಿಜ್ಯ), ಶೀಲವಿಲ್ಲದ ಶಿಕ್ಷಣ, ಶ್ರಮವಿಲ್ಲದ ಸಂಪತ್ತು, ತ್ಯಾಗವಿಲ್ಲದ ಪೂಜೆ, ಮಾನವೀಯತೆಯಿಲ್ಲದ ವಿಜ್ಞಾನ, ತತ್ವರಹಿತ ರಾಜಕೀಯ, ಆತ್ಮಸಾಕ್ಷಿರಹಿತ ಭೋಗ ಇವುಗಳಿಂದ ಸಮಾಜ ಮುಕ್ತವಾದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ.**

*** ನೀವು ಭದ್ರವಾಗಿ ಅಂಟಿಕೊಳ್ಳಬೇಕಾದುದು ನನ್ನ ಹೆಸರಿಗಲ್ಲ, ತತ್ವಗಳಿಗೆ. ಅದರ ಅಳತೆಗೋಲಿನಿಂದ ನಿಮ್ಮ ಒಂದೊಂದು ಚಟುವಟಿಕೆಯನ್ನೂ ಅಳೆದು, ಅದರಿಂದ ಎದುರಾಗುವ ಎಲ್ಲ ಸಮಸ್ಯೆಗಳನ್ನೂ ನಿರ್ಭೀತರಾಗಿ ಎದುರಿಸಿ.**

# ನಮ್ಮ ನಡಿಗೆ ಕುಷ್ಠ ರೋಗ ತಡೆಯುವ ಕಡೆಗೆ

ಕುಷ್ಠ ರೋಗವು ದೀರ್ಘಕಾಲದ ಖಾಯಿಲೆಯಾಗಿದ್ದು, ಮೈಕೋ ಬ್ಯಾಕ್ಟೀರಿಯಂ ಲೆಪ್ರೆಯಿ ಬ್ಯಾಕ್ಟೀರಿಯಾದಿಂದ ಬರುವಂತಹದು. ಗಾಂಧೀಜಿಯವರ ಹುತಾತ್ಮ ದಿನದಂದು ಪ್ರತಿ ವರ್ಷ ಜನವರಿ 30 ರಂದು 'ವಿಶ್ವ ಕುಷ್ಠ ರೋಗ ದಿನ' ಅಥವಾ 'ಕುಷ್ಠ ರೋಗ ನಿರ್ಮೂಲನಾ' ದಿನವೆಂದು ಆಚರಿಸಲಾಗುತ್ತದೆ. ಇದರ ಪ್ರಮುಖ ಉದ್ದೇಶವೆಂದರೆ ಜನರಲ್ಲಿ ಕುಷ್ಠ ರೋಗದ ಲಕ್ಷಣಗಳು, ಚಿಕಿತ್ಸೆ ಮತ್ತು ಅಪನಂಬಿಕೆಗಳ ಮಾಹಿತಿ ನೀಡುವ ಮೂಲಕ ರೋಗಿಗಳನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಮೂಲಕ ಗೌರವಯುತವಾಗಿ ಬದುಕಲು ಅವಕಾಶ ಕಲ್ಪಿಸಲು ಮಾಡುವ ಒಂದು ಸಣ್ಣ ಪ್ರಯತ್ನ.

ಭಾರತವು ಕುಷ್ಠ ರೋಗಿಗಳ ಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿದೆ. ಈ ರೋಗಕ್ಕೆ ಕಾರಣವಾದ ಜೀವಿ 'ಮೈಕೋಬ್ಯಾಕ್ಟೀರಿಯಂ ಲೆಪ್ರೆಯಿ' ಅನ್ನು ಮೊದಲ ಬಾರಿಗೆ ಡಾ.ಗೆರ್ಹಾರ್ಡ್ ಅರ್ಮೂಯೆರ್ ಹ್ಯಾನ್ಸೆನ್ ಕಂಡು ಹಿಡಿದರು. ಅವರು ಕಂಡು ಹಿಡಿದಿರುವುದರಿಂದ ಇದಕ್ಕೆ ಹ್ಯಾನ್ಸೆನ್ ಕಾಯಿಲೆ ಎಂದು ಕೂಡ ಕರೆಯುತ್ತಾರೆ.

ಕುಷ್ಠ ರೋಗದ ಲಕ್ಷಣಗಳು ಇಂತಿವೆ :

1. ಚರ್ಮದ ಮೇಲೆ ತಿಳಿ-ಬಿಳಿ, ತಾಮ್ರ ವರ್ಣದ ಮಚ್ಚೆಗಳಿಗೆ ಸ್ಪರ್ಶ ಜ್ಞಾನವಿರುವುದಿಲ್ಲ.

2. ಕೈ ಮತ್ತು ಕಾಲುಗಳು ಜೋಮು ಹಿಡಿಯುವುದು.

3. ಕೈ ಮತ್ತು ಕಾಲುಗಳಲ್ಲಿ ಸ್ಪರ್ಶ ಇಲ್ಲದಿರುವುದರಿಂದ ಗಾಯಗಳು ಆಗುವುದು, ಬಿಸಿ ಮತ್ತು ತಣ್ಣನೆಯ ವ್ಯತ್ಯಾಸ ಗೊತ್ತಾಗದೇ ಇರುವುದರಿಂದ ಸುಟ್ಟ ಗಾಯಗಳು ಆಗಬಹುದು.

4. ಕಾಲಿಂದ ಚಪ್ಪಲಿ ಮತ್ತೆ ಮತ್ತೆ ಜಾರುವುದು ಮತ್ತು ನರಗಳ ನೋವು ಬರುವುದು ಉಂಟು.

5. ಹೊಳಪಿನಿಂದ ಕೂಡಿದ ದಪ್ಪನಾದ ಚರ್ಮ ಮತ್ತು ಚರ್ಮದ ಮೇಲೆ ಸಣ್ಣ ಗಂಟುಗಳು, ಇವುಗಳು ವಿಶೇಷವಾಗಿ ಕಿವಿಯ ಹಾಲೆ, ಮುಖ ಮತ್ತು ಕೈ ಕಾಲುಗಳ ಮೇಲೆ ಕಾಣಬಹುದು.

6. ಕೈ, ಪಾದ ಮತ್ತು ಕಣ್ಣುಗಳಲ್ಲಿ ಬಲಹೀನತೆ, ಅಂಗಾಲುಗಳಲ್ಲಿ ಹುಣ್ಣು ಕಾಣಿಸಿಕೊಳ್ಳುತ್ತವೆ.

7. ಕಣ್ಣುಗಳು ಪೂರ್ಣವಾಗಿ ಮುಚ್ಚಲು ಆಗದಿರುವುದು.

ಬ್ಯಾಕ್ಟೀರಿಯಾಗಳ ಸಂಖ್ಯಾಭಿವೃದ್ಧಿಯು ಹೆಚ್ಚಳವಾಗುವ ಪ್ರಮಾಣದ ಮೇಲೆ ಈ ರೋಗವನ್ನು ಎರಡು ರೀತಿಯಾಗಿ ವಿಂಗಡಿಸಲಾಗುತ್ತದೆ. ಅವುಗಳೆಂದರೆ 'ಪಾಸಿಬ್ಯಾಸಿಲರಿ' (1 ರಿಂದ 5 ಚರ್ಮದ ಮಚ್ಚೆಗಳು) ಮತ್ತು 'ಮಲ್ಟಿ ಬ್ಯಾಸಿಲರಿ' (ಜಾಸ್ತಿ ಪ್ರಮಾಣದಲ್ಲಿ ಬ್ಯಾಕ್ಟೀರಿಯಾಗಳಿರುತ್ತವೆ ಮತ್ತು 5 ಕ್ಕಿಂತ ಹೆಚ್ಚು ಚರ್ಮದ ಮಚ್ಚೆಗಳು



ಇರುತ್ತವೆ) ರೋಗದ ಪ್ರತಿಕ್ರಿಯೆ (lepra reaction) ಎಂದರೆ ಕೆಲವು ರೋಗಿಗಳಲ್ಲಿ ಮಚ್ಚೆಗಳು ಇದ್ದಕ್ಕಿದಂತೆ ಕೆಂಪಾಗಿ, ಬಾವು ಬರುವುದು ಮತ್ತು ನೋವು ಬರುವುದು, ಕೈ-ಕಾಲುಗಳಲ್ಲಿ ಕೆಲವು ನರಗಳು ಊತ ಮತ್ತು ನೋವು ಬರುವುದು ಮುಂತಾದವುಗಳನ್ನು ಕಾಣಬಹುದು. ಈ ರೀತಿಯಾದಲ್ಲಿ ಗಾಬರಿಯಾಗದೆ, ತಕ್ಷಣ ಚರ್ಮ ವೈದ್ಯರ ಹತ್ತಿರ ಸಂಪರ್ಕಿಸಿ, ಚಿಕಿತ್ಸೆ ಪಡೆಯಿರಿ.

ಚಿಕಿತ್ಸೆ-ಬಹುವಿಧ ಔಷಧ ಚಿಕಿತ್ಸೆ (MDT) ವೆಂದರೆ ಮೂರು ಬಗೆಯ ಔಷಧಿಗಳೆಂದರೆ, ಕ್ಲೋಫಾಜಿಮೈನ್ (clofazamine) ಮತ್ತು ರಿಫಾಂಪಿಸಿನ್ (Rifampicin), ಡ್ಯಾಪ್ಸೋನ್ (Dapsone) ಒಳಗೊಂಡ ಚಿಕಿತ್ಸೆ ಪರಿಣಾಮಕಾರಿಯಾಗಿದೆ. ಪಾಸಿಬ್ಯಾಸಿಲ್ಲರಿಗೆ (P.B) ಸುಮಾರು 6 ತಿಂಗಳು ಮತ್ತು 'ಮಲ್ಟಿ ಬ್ಯಾಸಿಲ್ಲರಿ'ಗೆ (M.B) ಸುಮಾರು 12 ತಿಂಗಳು ನಿಯಮಿತವಾಗಿ ಎಂ.ಡಿ.ಟಿ ಪೂರ್ಣ ಚಿಕತ್ಸೆ ಪಡೆದರೆ, ಕುಷ್ಠ ರೋಗ ಗುಣಪಡಿಸಬಹುದು.

- ಡಾ. ಸೂಗಾರೆಡ್ಡಿ, ಚರ್ಮ ರೋಗ ವಿಭಾಗದ ಮುಖ್ಯಸ್ಥರು, ಜ.ಜ.ಮು ವೈದ್ಯಕೀಯ ಕಾಲೇಜು
- ಡಾ. ಪರಮೇಶ್ವರ
ಸ್ನಾತಕೋತ್ತರ ವಿದ್ಯಾರ್ಥಿ, ಚರ್ಮ ರೋಗ ವಿಭಾಗ
ಜ.ಜ.ಮು ವೈದ್ಯಕೀಯ ಕಾಲೇಜು, ದಾವಣಗೆರೆ.
ಮೊ: 6363576220

ಕುಷ್ಠ ರೋಗ ನಿವಾರಣೆ ಕಾರ್ಯಕ್ರಮ ಕೇವಲ ಪರಿಹಾರವಲ್ಲ. ಅದು ಮನುಷ್ಯನ ಬದುಕಿನ ಹತಾಶೆ ಭಾವನೆಯನ್ನು, ಸಂತಸ ತರುವ ಶ್ರದ್ದೆಯನ್ನಾಗಿ ಮತ್ತು ವೈಯಕ್ತಿಕ ನೆಲೆಯ ಮಹದಾಸೆಯನ್ನು ನಿಸ್ವಾರ್ಥ ಸೇವೆಯನ್ನಾಗಿ ರೂಪಿಸುವ ಪವಿತ್ರ ಕಾರ್ಯವಾಗಿದೆ.

**- ಮಹಾತ್ಮ ಗಾಂಧೀಜಿ**

ಎಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ದೊರೆಯುತ್ತದೆ. ರೋಗದ ಪ್ರತಿಕ್ರಿಯೆಗೆ ಸ್ಟೆರಾಯ್ಡ್ (steroid) ಮಾತ್ರೆ ಕೊಟ್ಟು ತಗ್ಗಿಸಬಹುದು. ಕೆಲವು ಕೈ, ಕಾಲು ಮತ್ತು ಕಣ್ಣುಗಳ ನ್ಯೂನತೆಯನ್ನು ಶಸ್ತ್ರ ಚಿಕಿತ್ಸೆ ಮೂಲಕ ಸರಿಪಡಿಸಬಹುದು.

ಕುಷ್ಠ ರೋಗದ ಬಗ್ಗೆ ಜನರಲ್ಲಿ ಹಲವಾರು ಅಪನಂಬಿಕೆಗಳು ಇವೆ. ಅವುಗಳೆಂದರೆ ಈ ರೋಗವು ಹಿಂದಿನ ಜನ್ಮದ ಪಾಪದಿಂದ ಮತ್ತು ಬೇರೆಯವರ ಶಾಪದಿಂದ ಬರುತ್ತದೆ ಎಂಬ ಮೂಢನಂಬಿಕೆ ಜನರಲ್ಲಿ ದಟ್ಟವಾಗಿದೆ. ಈ ರೋಗಕ್ಕೆ ಮದ್ದು ಇಲ್ಲ ಎಂಬ ಕಲ್ಪನೆ ಹಲವರಲ್ಲಿ ಇದೆ. ಯಾವುದೇ ಕಾರಣಕ್ಕೂ ವಂಶಪಾರಂಪರ್ಯದಿಂದಲೂ ಬರುವುದಿಲ್ಲ. ಕುಷ್ಠ ರೋಗ ಚಿಕಿತ್ಸೆ ಇಲ್ಲ ಮತ್ತು ಗುಣಮುಖವಾಗುವುದಿಲ್ಲ ಎಂಬ ಅಪನಂಬಿಕೆ ಇದೆ. (4ನೇ ಪುಟಕ್ಕೆ)

# ಇಂದು ಮಾಗನೂರು ಬಸಪ್ಪ ಪ್ರಶಸ್ತಿ ಪ್ರದಾನ

**ಡಾ. ಉದಯಶಂಕರ ಪುರಾಣಿಕ ಅವರಿಗೆ ಪ್ರಶಸ್ತಿ**

ದಾವಣಗೆರೆ, ಜ.29- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 30ರ ಶನಿವಾರ ನಗರದ ಕುವೆಂಪು ಕನ್ನಡ ಭವನದಲ್ಲಿ 2020ನೇ ಸಾಲಿನ ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ.

30 ದೇಶಗಳಲ್ಲಿ ಕನ್ನಡ ನಾಡು-ನುಡಿ ಶಿಕ್ಷಣ ಮತ್ತು ಪ್ರಚಾರ ಕೆಲಸದಲ್ಲಿ ತೊಡಗಿರುವ ಕೊಪ್ಪಳ ಜಿಲ್ಲೆಯ ಸಾಹಿತಿ ಹಾಗೂ ವಿಜ್ಞಾನಿ ಡಾ. ಉದಯಶಂಕರ ಪುರಾಣಿಕ ಅವರು ಈ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಅವರ ಈ ಸೇವೆ ಪರಿಗಣಿಸಿ ಗೌರವಿಸಲಾಗುತ್ತಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮಂಜುನಾಥ್ ಕುರ್ಕಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪುರಾಣಿಕ ಅವರು, ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಬಿಗ್ ಡೇಟಾ, ಮಿಷಿನ್ ಲರ್ನಿಂಗ್, ಸೈಬರ್ ಅಪರಾಧಗಳ ವಿಧಿ ವಿಜ್ಞಾನದ ತಂತ್ರಜ್ಞಾನ, ಮೊಬೈಲ್ ತಂತ್ರಾಂಶಗಳ ಅಭಿವೃದ್ಧಿ ಮತ್ತು ಕನ್ನಡದ ಹಸ್ತಪ್ರತಿಗಳು, ಅಪರೂಪದ ಪುಸ್ತಕಗಳು, ತಾಳೆಗರಿ ಇವುಗಳ ಮೂಲಪ್ರತಿಗೆ ಧಕ್ಕೆಯಾಗದಂತೆ ಡಿಜಿಟಲ್ ರೂಪಕ್ಕೆ ತರಲು ಕೋಲ್ಡ್ ಸ್ಕ್ಯಾನಿಂಗ್ ತಂತ್ರಜ್ಞಾನ ಹಾಗೂ ಕನ್ನಡ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿದ್ದಾರೆ. 2600 ಲೇಖನ ಬರೆದಿದ್ದಾರೆ. 1200 ವಚನಗಳು, 4 ಪುಸ್ತಕಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಲಿರುವ ಸಾಣೇಹಳ್ಳಿಯ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ 50 ಸಾವಿರ ರೂ. ಮೊತ್ತ ಹಾಗೂ ಸ್ಮರಣಿಕೆ ಒಳಗೊಂಡ ಪ್ರಶಸ್ತಿ ಪ್ರದಾನ ಮಾಡುವರು. ಪ್ರತಿಷ್ಠಾನದ ಅಧ್ಯಕ್ಷ ಎಂ.ಬಿ. ಸಂಗಮೇಶ್ವರ ಗೌಡರು ಅಧ್ಯಕ್ಷತೆ ವಹಿಸುವರು. ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಉದ್ಘಾಟಿಸಲಿದ್ದಾರೆ. ರಾಜ್ಯ ಸಹಕಾರ ಮಹಾ ಮಂಡಲದ ನಿರ್ದೇಶಕ ಶೇಖರಗೌಡ ಮಾಲಿ ಪಾಟೀಲ ಅಭಿನಂದನಾ ನುಡಿಗಳನ್ನಾಡಲಿದ್ದಾರೆ. ಅತಿಥಿಗಳಾಗಿ ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಲಿಂಗಯ್ಯ ಬಿ. ಹಿರೇಮಠ, ಕೊಪ್ಪಳ ಜಿಲ್ಲಾ ಕಸಾಪ ಅಧ್ಯಕ್ಷ ರಾಜಶೇಖರ ಅಂಗಡಿ ಭಾಗವಹಿಸುವರು. ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಎ.ಆರ್. ಉಜ್ಜನಪ್ಪ ಉಪಸ್ಥಿತರಿರುವರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಸಾಪದ ಎನ್. ಎಸ್.ರಾಜು, ಎ.ಆರ್. ಉಜ್ಜನಪ್ಪ, ಬಿ. ದಿಳ್ಯಪ್ಪ, ಜಿ.ಆರ್. ಷಣ್ಮುಖಪ್ಪ ಸೇರಿದಂತೆ ಇತರರಿದ್ದರು.

# 2021ರಲ್ಲಿ ಶೇ.11ರ ಬೆಳವಣಿಗೆ : ಸಮೀಕ್ಷೆ

ನವದೆಹಲಿ, ಜ. 29 – ಮುಂದಿನ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕ ವ್ಯವಸ್ಥೆ ಶೇ.11ರಷ್ಟು ಬೆಳವಣಿಗೆ ಕಾಣಲಿದೆ. ಕೊರೊನಾದಿಂದಾಗಿ ಉಂಟಾದ ಬೆಳವಣಿಗೆ ಕುಸಿತದಿಂದ ಹೊರ ಬಂದು ಕ್ಷಿಪ್ರ ವೇಗದ ಬೆಳವಣಿಗೆ ಕಾಣಲಿದೆ ಎಂದು ಬಜೆಟ್ ಪೂರ್ವದ ಆರ್ಥಿಕ ಸಮೀಕ್ಷೆ ತಿಳಿಸಿದೆ.

2020-21ರ ಹಣಕಾಸು ವರ್ಷದಲ್ಲಿ ಜಿ.ಡಿ.ಪಿ. ಬೆಳವಣಿಗೆ ದರ ದಾಖಲೆಯ ಶೇ.7.7ರಷ್ಟು ಕುಸಿಯಲಿದೆ. 1979-80ರ ನಂತರ ಮೊದಲ ಬಾರಿಗೆ ವಾರ್ಷಿಕ ಬೆಳವಣಿಗೆ ದರ ಕುಸಿತವಾಗುತ್ತಿದೆ. ಆ ವರ್ಷದಂದು ಶೇ.5.2ರ ಕುಸಿತವಾಗಿತ್ತು.

2020-21ರ ಆರ್ಥಿಕ ಸಮೀಕ್ಷೆಯ ಪ್ರಕಾರ, ಪ್ರಸಕ್ತ ಹಣಕಾಸು ವರ್ಷದಲ್ಲಿ ಕೃಷಿ ವಲಯವೊಂದೇ ಬೆಳವಣಿಗೆ ಕಂಡಿದೆ. ಉಳಿದಂತೆ ಸೇವೆ, ಉತ್ಪಾದನೆ ಹಾಗೂ ನಿರ್ಮಾಣ ವಲಯಗಳಿಗೆ ಭಾರೀ ಹೊಡೆತ ಬಿದ್ದಿದೆ.

2020-21ರಲ್ಲಿ ಕೊರೊನಾ ಕಾರಣದಿಂದಾಗಿ ಶೇ.7.7ರ ಕುಸಿತವಾದ ನಂತರ, 2021-22ರಲ್ಲಿ ನೈಜ ಜಿ.ಡಿ.ಪಿ. ದರ ಶೇ.11ರ ಬೆಳವಣಿಗೆ ಕಾಣಲಿದೆ. ನಾಮಿನಲ್ ಜಿಡಿಪಿ ದರ ಶೇ.15.4ರಷ್ಟು ಬೆಳವಣಿಗೆ ಕಾಣಲಿದೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಮೀಕ್ಷಾ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿದ್ದಾರೆ.

17 ವರ್ಷಗಳ ನಂತರ ಭಾರತದಲ್ಲಿ ಚಾಲ್ತಿ ಖಾತೆಯಲ್ಲಿ ಹೆಚ್ಚುವರಿಯಾಗಲಿದೆ ಎಂದೂ ಅವರು ತಿಳಿಸಿದ್ದಾರೆ.

# ನಾಳೆ ವಿಶ್ವಕರ್ಮ ಸಮಾಜದ ಸಭೆ

ದಾವಣಗೆರೆ, ಜ.29 - ವಿಶ್ವಕರ್ಮ ಸಮಾಜ ಸಂಘದ ಸಭೆಯು ನಾಡಿದ್ದು ದಿನಾಂಕ 31 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾಂಭ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಂಘದ ಅಧ್ಯಕ್ಷ ನಾಗೇಂದ್ರಾಚಾರ್ ಅವರು ಸಭೆಯ ಅಧ್ಯಕ್ಷತೆ ವಹಿಸುವರು ಎಂದು ಸಂಘದ ಕಾರ್ಯದರ್ಶಿ ವಿ.ಎಂ. ಕೊಟ್ರೇಶಾಚಾರ್ ತಿಳಿಸಿದ್ದಾರೆ.

# ಉಪಸಭಾಪತಿಯಾಗಿ ಪ್ರಾಣೇಶ್



ಬೆಂಗಳೂರು, ಜ. 29 - ಅಧಿಕಾರದಿಂದ ಕೆಳಗಿಳಿಯಲು ಕಾರಣರಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ರಾಜಕೀಯ ಮುಯ್ಯಿ ತೀರಿಸುವ ಉದ್ದೇಶದಿಂದ ಬಿಜೆಪಿ ಜೊತೆ ಕೈಜೋಡಿಸಿದ ಜೆಡಿಎಸ್ ತನ್ನ ಗುರಿಯಲ್ಲಿ ಯಶಸ್ವಿಯಾಗಿದೆ.

ಇದರ ಮೊದಲ ಹಂತವಾಗಿ ವಿಧಾನಪರಿಷತ್ತಿನಲ್ಲಿ ಬಹುಮತ ಇಲ್ಲದಿದ್ದರೂ ಬಿಜೆಪಿಯ ಎಂ.ಕೆ. ಪ್ರಾಣೇಶ್ ಅವರು ಉಪಸಭಾಪತಿಯಾಗಿ ಇಂದು ಆಯ್ಕೆಗೊಂಡರು.

ಉಪಸಭಾಪತಿ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಕೆ.ಸಿ. ಕೊಂಡಯ್ಯ ಕಣಕ್ಕಿಳಿದಿದ್ದರು.

ಚುನಾವಣೆ ಸಂದರ್ಭದಲ್ಲಿ ಜೆಡಿಎಸ್ ಸದಸ್ಯರು ಬಿಜೆಪಿಗೆ ಬೆಂಬಲ ನೀಡಿದ್ದರಿಂದ ಎಂ.ಕೆ. ಪ್ರಾಣೇಶ್ ಗೆಲುವು ಸಾಧಿಸಿದರು.

ಕಾಂಗ್ರೆಸ್‌ಗೆ ಸಭಾಪತಿ ಸೇರಿ 29 ಸದಸ್ಯ ಬಲವಿದ್ದರೂ ಅವರ ಅಭ್ಯರ್ಥಿಗೆ ಲಭಿಸಿದ್ದು ಕೇವಲ 24 ಮತಗಳು. ಕಾಂಗ್ರೆಸ್ ತನ್ನ ಮತಗಳನ್ನೇ ಪೂರ್ಣವಾಗಿ ಪಡೆಯಲಾಗಲಿಲ್ಲ. ಕಾಂಗ್ರೆಸ್‌ನ ನಾಲ್ಕು ಸದಸ್ಯರು ಗೈರು ಹಾಜರಾಗಿದ್ದರು.

ಎಂ.ಕೆ.ಪ್ರಾಣೇಶ್ ಅವರಿಗೆ 41 ಮತಗಳು, ಕಾಂಗ್ರೆಸ್‌ನ ಕೆ.ಸಿ. ಕೊಂಡಯ್ಯ ಅವರಿಗೆ 24 ಮತಗಳು ಚಲಾವಣೆಗೊಂಡವು. ಪ್ರಾಣೇಶ್ ಪರವಾಗಿ ಜೆಡಿಎಸ್ ಸದಸ್ಯರು ಮತ ಚಲಾಯಿಸಿದರು. ಉಪಸಭಾಪತಿಯಾಗಿದ್ದ ಜೆಡಿಎಸ್‌ನ ಧರ್ಮೇಗೌಡ ಅವರ ಅಕಾಲಿಕ ನಿಧನದಿಂದ ತೆರವಾದ ಸ್ಥಾನಕ್ಕೆ ಚುನಾವಣೆ ನಡೆಯಿತು.

ಕಳೆದ ಅಧಿವೇಶನದ ಸಂದರ್ಭದಲ್ಲೇ ಹಾಲಿ ಸಭಾಪತಿ ಪ್ರತಾಪಚಂದ್ರ ಶೆಟ್ಟಿ ವಿರುದ್ಧ ಬಿಜೆಪಿ ಸದಸ್ಯರು ಅವಿಶ್ವಾಸ ಗೊತ್ತುವಳಿ ಮಂಡಿಸಿದ್ದರು.

ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ಕಿತ್ತಾಟದಿಂದ ಅವಿಶ್ವಾಸ ಗೊತ್ತುವಳಿ ಚರ್ಚೆಗೇ ಬರಲಿಲ್ಲ, ಇದೀಗ ಮತ್ತೆ ಗೊತ್ತುವಳಿ ಕೈಗೆತ್ತಿಕೊಳ್ಳಲು ಸಭಾಪತಿ ಅವರಿಗೆ ಮನವಿ ಮಾಡಲಾಗಿದೆ.

ಇದನ್ನು ಅರಿತ ಸಭಾಪತಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದಾರೆ, ಇವರಿಂದ ತೆರವಾಗುವ ಸ್ಥಾನಕ್ಕೆ ಜೆಡಿಎಸ್‌ನ ಬಸವರಾಜ ಹೊರಟ್ಟಿ ಅವರನ್ನು ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಕಣ್ಕಿಳಿಸಲಿವೆ.

# ಶೇ.70ರಷ್ಟು ಬೋಧನಾ ಶುಲ್ಕ

**(1ನೇ ಪುಟದಿಂದ)** ಸೂಚಿಸಿದ ಶುಲ್ಕಕ್ಕಿಂತ ಕಡಿಮೆ ಪಡೆದರೆ ನಮಗೂ ಸಂತಸವಾಗಲಿದೆ ಎಂದರು. ಇದು ಕೋವಿಡ್-19 ವರ್ಷವಾಗಿರುವುದರಿಂದ ಶಾಲೆಗಳು, ಪೋಷಕರು ಸರ್ಕಾರದೊಂದಿಗೆ ಸಹಕರಿಸಿ ಎಂದರು.

# ನಗರದಲ್ಲಿ ಇಂದು - ನಾಳೆ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿ

ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ ಹಾಗೂ ಯಂಗ್ ಚಾಲೆಂಜರ್ಸ್ ಕ್ರೀಡಾ ಸಮಿತಿ ವತಿಯಿಂದ ದಿ. ಆರ್. ವಸಂತಕುಮಾರ್ ಅವರ ಸವಿನೆನಪಿಗಾಗಿ ಬಾಲಕರ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿಯನ್ನು ಇಂದು ಮತ್ತು ನಾಳೆ ನಗರದ ಲೇಬರ್ ಕಾಲೋನಿಯಲ್ಲಿರುವ ನಾಟ್ಯಾಚಾರ್ಯ ಕುಲಕರ್ಣಿ ರಂಗಮಂದಿರದ ಒಳ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಆಯೋಜಕರಾದ ಸುದೀಪ್ (89516 92861), ರಾಜು (63638 57484), ಪ್ರಕಾಶ್ (76766 02815) ತಿಳಿಸಿದ್ದಾರೆ.

**ಶ್ರೀ ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**
ಬಟವಾಡಿ ವೃತ್ತ, ತುಮಕೂರು

**ಸುಖಕರ ಪ್ರವಾಸಗಳು**

✦ **24-2-2021 ರಿಂದ 4 ದಿನಗಳ** ಹೈದರಾಬಾದ್, ಶ್ರೀ ಶೈಲ ಮಹಾನಂದಿ, ಬೆಲಂ ಕೇವ್ಸ್ ಮಂತ್ರಾಲಯ 2+2 ಬಸ್ ಪ್ರವಾಸ. ರೂ 7200/-

✦ **24-3-2021 ರಿಂದ 9 ದಿನಗಳ** ಗುಜರಾತ್ ಪ್ರವಾಸ. ಸರ್ದಾರ್ ಪಟೇಲ್ ಪ್ರತಿಮೆ, ನಿಷ್ಕಳಂಕ ಮಹಾದೇವ, ಸೋಮನಾಥ, ನಾಗೇಶ್ವರ, ಬೆಟ್ ದ್ವಾರಕ, ದ್ವಾರಕ, ಗಾಂಧಿನಗರ, ಅಹಮದಾಬಾದ್ ಪ್ರವಾಸ ರೂ. 23000/- (ONE SIDE TRAIN - ONE SIDE FLIGHT)

✦ **17-4-21 & 30-4-21** ದೆಹಲಿ, ಕಾಶಿ, ಮಥುರಾ, ಆಗ್ರ, ನೈಮಿಷಾರಣ್ಯ, ಅಯೋಧ್ಯಾ, ಸಾರಾನಾಥ್.. 8 ದಿನಗಳು ವಿಮಾನ ರೂ. 29000/-

ಎಲ್ಲಾ ಪ್ರವಾಸಕ್ಕೂ ಊಟ, ತಿಂಡಿ, ರೂಂ ವಸತಿ ಸೇರಿದೆ.

ಮೊ : 83103 98485, 84960 44942

**ಜನ್ಮ ದಿನದ ಶುಭಾಶಯಗಳು**








ಕಲರ್ಸ್ ಕಲ್ಚರಲ್ ಅಕಾಡೆಮಿಯ ಸಂಸ್ಥಾಪಕರು,
ಅಧ್ಯಕ್ಷರೂ, ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಮಿತಿ
ಖಜಾಂಚಿಗಳೂ, ಸಂಘಟನಾ ಚತುರರೂ,
ಕ್ರೀಡಾಭಿಮಾನಿಗಳೂ ಆದ
**ಶ್ರೀ ನಲ್ಲೂರು ಎಸ್. ರಾಘುಣ್ಣ (ಗುರೂಜಿ)**
ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳು.

**ಕಲರ್ಸ್ ಕಲ್ಚರಲ್ ಅಕಾಡೆಮಿ, ದಾವಣಗೆರೆ.**

**ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.**

**ದಿನಾಂಕ 31.01.2021ನೇ ಭಾನುವಾರ ನಡೆಯಲಿರುವ 2020-21 ರಿಂದ 2022-23 ನೇ ಸಾಲಿಗೆ (3 ವರ್ಷ ಅವಧಿಗೆ) ಮಾನ್ಯ ಶ್ರೀ ಯು.ಜಿ. ಶಿವಕುಮಾರ್ ಇವರ ನೇತೃತ್ವದಲ್ಲಿ ಕಾರ್ಯಕಾರಿ ಮಂಡಳಿಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿ ಮತ್ತು ಚಿಹ್ನೆಗಳ ವಿವರ**

| ಕ್ರ.ಸಂ. | ಉಮೇದುದಾರರ ಹೆಸರು | ಸ್ಥಾನ | ಭಾವಚಿತ್ರ | ಗುರುತು | ಮೊಹರು |
|---|---|---|---|---|---|
| 2 | ಶಿವಕುಮಾರ ಯು.ಜಿ. | ಅಧ್ಯಕ್ಷ |  |  | 卐 |
| 3 | ವೀರಣ್ಣ ಐ.ವಿ. (ಐನಳ್ಳಿ) | ಉಪಾಧ್ಯಕ್ಷ |  |  | 卐 |
| 1 | ರವಿಶಂಕರ್ ಪಲ್ಲಾಗಟ್ಟೆ | ಗೌರವ ಕಾರ್ಯದರ್ಶಿ |  |  | 卐 |
| 2 | ನಾಗರಾಜ್ ಕೆ.ಬಿ. | ಗೌರವ ಸಹ ಕಾರ್ಯದರ್ಶಿ |  |  | 卐 |
| 1 | ಪುಟ್ಟಪ್ಪ ಕಾಶಿಪುರ | ಕೋಶಾಧ್ಯಕ್ಷ |  |  | 卐 |
| ನಿರ್ದೇಶಕರ ಸ್ಥಾನಗಳು | | | | | |
| 1 | ಅಭಿಷೇಕ್ ಬಿ.ಜೆ. (ಬೇತೂರು) | |  |  | 卐 |
| 5 | ತಿಮ್ಮರಾಜ ಗುಪ್ತಾ ಎಸ್.ಕೆ. | |  |  | 卐 |
| 6 | ನಾಗರಾಜ ಬಿ.ಜಿ. (ಬಸವಾಪಟ್ಟಣ) | |  |  | 卐 |
| 9 | ಪಟೇಲ್ ಬಿ.ಪಿ. (ಕಾರಿಗನೂರು ಬಸವೇಶ) | |  |  | 卐 |
| 10 | ಬೆಳ್ಳೂಡಿ ಸದಾನಂದ | |  |  | 卐 |
| 11 | ಮಲ್ಲಿಕಾರ್ಜುನ ಬಾದಾಮಿ | |  |  | 卐 |

**ಕಬ್ಲ್‌ನ ಸರ್ವತೋಮುಖ ಅಭಿವೃದ್ಧಿ ಹಾಗೂ ನಿಮ್ಮ ಸ್ಪಂದನೆಗೆ ಶ್ರಮಿಸಲಿ ನಮ್ಮ ಗುಂಪಿನ 11 ಜನ ಅಭ್ಯರ್ಥಿಗಳಿಗೂ ಮತ ಚಲಾಯಿಸುವುದರ ಮೂಲಕ ಆಶೀರ್ವದಿಸಿ ಜಯಶೀಲರನ್ನಾಗಿ ಮಾಡಲು ವಿನಮ್ರ ವಿನಂತಿ ಮಾಡಿಕೊಳ್ಳುತ್ತಿದ್ದೇವೆ.**

**ಮತದಾನದ ದಿನಾಂಕ : 31-01-2021ನೇ ಭಾನುವಾರ**
**ಮತದಾನ ಸಮಯ : ಬೆಳಿಗ್ಗೆ 9-00 ರಿಂದ ಮಧ್ಯಾಹ್ನ 3-00 ರವರೆಗೆ**
**ಮತದಾನದ ಸ್ಥಳ : ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.**

ವಿ.ಸೂ. : ಕಡ್ಡಾಯವಾಗಿ ಮಾಸ್ಕ್ ಧರಿಸಿಕೊಂಡು, ಮತ ಚಲಾಯಿಸಿ.

**ಬನ್ನಿ... ಕೈ ಜೋಡಿಸಿ**

*ನಿಮ್ಮ ಮತ, ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆಗೆ ಹಿತ*

# ಚನ್ನಗಿರಿ ಮತ್ತು ನ್ಯಾಮತಿ ಗ್ರಾ.ಪಂ.ಗಳ ಅಧ್ಯಕ್ಷರು, ಉಪಾಧ್ಯಕ್ಷರ ಮೀಸಲಾತಿ ಪಟ್ಟಿ

ದಾವಣಗೆರೆ, ಜ.28- ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ಬುಧವಾರ ಜಿಲ್ಲಾಡಳಿತ ಭವನದ ತುಂಗಭದ್ರ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಇವರ ಅಧ್ಯಕ್ಷತೆಯಲ್ಲಿ ಗ್ರಾಮ ಪಂಚಾಯ್ತಿಯ ಮೊದಲನೇ 30 ತಿಂಗಳ ಅವಧಿಗೆ ನ್ಯಾಮತಿ ಹಾಗೂ ಚನ್ನಗಿರಿ ತಾಲ್ಲೂಕಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳಿಗೆ ತಂತ್ರಾಂಶದ ಮೂಲಕ ಕೆಳಕಂಡ ಪಟ್ಟಿಯನ್ವಯ ವರ್ಗವಾರು ಮೀಸಲಾತಿ ನಿಗದಿಪಡಿಸಲಾಗಯಿತು.

## ನ್ಯಾಮತಿ ತಾಲ್ಲೂಕು

| ಒಟ್ಟು ಸ್ಥಾನಗಳು | ಅನುಸೂಚಿತ ಜಾತಿ | ಅನುಸೂಚಿತ ಪಂಗಡ | ಹಿಂದುಳಿದ ವರ್ಗ 'ಅ' | ಹಿಂದುಳಿದ ವರ್ಗ 'ಬ' | ಸಾಮಾನ್ಯ ವರ್ಗ |
|---|---|---|---|---|---|
| 17(9) | 3(2) | 1(1) | 3(2) | 1(0) | 9(4) |

| ಸಂಖ್ಯೆ | ಗ್ರಾಮ ಪಂಚಾಯಿತಿ ಹೆಸರು | ಅಧ್ಯಕ್ಷ | ಉಪಾಧ್ಯಕ್ಷ |
|---|---|---|---|
| 1 | ಚೀಲೂರು ಕಡದಕಟ್ಟೆ | ಹಿಂದುಳಿದ 'ಅ' ವರ್ಗ | ಸಾಮಾನ್ಯ (ಮಹಿಳೆ) |
| 2 | ಗುಡ್ಡೇಹಳ್ಳಿ | ಹಿಂದುಳಿದ 'ಅ' ವರ್ಗ (ಮಹಿಳೆ) | ಸಾಮಾನ್ಯ |
| 3 | ಗೋವಿನಕೋವಿ | ಹಿಂದುಳಿದ 'ಅ' ವರ್ಗ (ಮಹಿಳೆ) | ಹಿಂದುಳಿದ 'ಬ' ವರ್ಗ |
| 4 | ಸುರಹೊನ್ನೆ | ಹಿಂದುಳಿದ 'ಬ' ವರ್ಗ | ಅನುಸೂಚಿತ ಜಾತಿ (ಮಹಿಳೆ) |
| 5 | ಯರಗನಾಳು | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 6 | ಕೆಂಚಿಕೊಪ್ಪ | ಸಾಮಾನ್ಯ | ಅನುಸೂಚಿತ ಪಂಗಡ (ಮಹಿಳೆ) |
| 7 | ವಡೇರಹತ್ತೂರು | ಸಾಮಾನ್ಯ | ಅನುಸೂಚಿತ ಜಾತಿ |
| 8 | ಗಂಗನಕೋಟೆ | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 9 | ಚೀಲೂರು | ಸಾಮಾನ್ಯ | ಅನುಸೂಚಿತ ಜಾತಿ (ಮಹಿಳೆ) |
| 10 | ಚಿನ್ನಿಕಟ್ಟೆ | ಸಾಮಾನ್ಯ (ಮಹಿಳೆ) | ಹಿಂದುಳಿದ 'ಅ'ವರ್ಗ |
| 11 | ಸವಳಂಗ | ಸಾಮಾನ್ಯ (ಮಹಿಳೆ) | ಸಾಮಾನ್ಯ |
| 12 | ಕುಂಕೋವ | ಸಾಮಾನ್ಯ (ಮಹಿಳೆ) | ಸಾಮಾನ್ಯ |
| 13 | ಫಲವನಹಳ್ಳಿ | ಸಾಮಾನ್ಯ (ಮಹಿಳೆ) | ಸಾಮಾನ್ಯ |
| 14 | ಟಿ.ಗೋಪಗೊಂಡನಹಳ್ಳಿ | ಅನುಸೂಚಿತ ಜಾತಿ | ಸಾಮಾನ್ಯ (ಮಹಿಳೆ) |
| 15 | ಬಸವನಹಳ್ಳಿ | ಅನುಸೂಚಿತ ಜಾತಿ (ಮಹಿಳೆ) | ಹಿಂದುಳಿದ 'ಅ'ವರ್ಗ (ಮಹಿಳೆ) |
| 16 | ಚಟ್ನಿಹಳ್ಳಿ | ಅನುಸೂಚಿತ ಜಾತಿ (ಮಹಿಳೆ) | ಹಿಂದುಳಿದ 'ಅ'ವರ್ಗ (ಮಹಿಳೆ) |
| 17 | ಬೆಳಗುತ್ತಿ | ಅನುಸೂಚಿತ ಪಂಗಡ (ಮಹಿಳೆ) | ಸಾಮಾನ್ಯ |

## ಚನ್ನಗಿರಿ ತಾಲ್ಲೂಕು

| ಒಟ್ಟು ಸ್ಥಾನಗಳು | ಅನುಸೂಚಿತ ಜಾತಿ | ಅನುಸೂಚಿತ ಪಂಗಡ | ಹಿಂದುಳಿದ ವರ್ಗ 'ಅ' | ಹಿಂದುಳಿದ ವರ್ಗ 'ಬ' | ಸಾಮಾನ್ಯ ವರ್ಗ |
|---|---|---|---|---|---|
| 61(31) | 12(6) | 6(3) | 10(5) | 2(1) | 31(16) |

| ಸಂಖ್ಯೆ | ಗ್ರಾಮ ಪಂಚಾಯಿತಿ ಹೆಸರು | ಅಧ್ಯಕ್ಷ | ಉಪಾಧ್ಯಕ್ಷ |
|---|---|---|---|
| 1 | ಚಿರಡೋಣಿ | ಹಿಂದುಳಿದ 'ಅ' ವರ್ಗ | ಅನುಸೂಚಿತ ಪಂಗಡ (ಮಹಿಳೆ) |
| 2 | ಹೊಸಕೆರೆ (ಬಸವಾಪಟ್ಟಣ) | ಹಿಂದುಳಿದ 'ಅ' ವರ್ಗ | ಅನುಸೂಚಿತ ಜಾತಿ (ಮಹಿಳೆ) |
| 3 | ಬುಳಸಾಗರ | ಹಿಂದುಳಿದ 'ಅ' ವರ್ಗ | ಸಾಮಾನ್ಯ (ಮಹಿಳೆ) |
| 4 | ತಿಪ್ಪಗೊಂಡನಹಳ್ಳಿ | ಹಿಂದುಳಿದ 'ಅ' ವರ್ಗ | ಅನುಸೂಚಿತ ಜಾತಿ (ಮಹಿಳೆ) |
| 5 | ವಡ್ನಾಳು | ಹಿಂದುಳಿದ 'ಅ' ವರ್ಗ | ಸಾಮಾನ್ಯ (ಮಹಿಳೆ) |
| 6 | ಕಾರಿಗನೂರು | ಹಿಂದುಳಿದ 'ಅ' ವರ್ಗ (ಮಹಿಳೆ) | ಸಾಮಾನ್ಯ |
| 7 | ನವಿಲೇಹಾಳು | ಹಿಂದುಳಿದ 'ಅ' ವರ್ಗ (ಮಹಿಳೆ) | ಅನುಸೂಚಿತ ಜಾತಿ |
| 8 | ಕೊರಟಿಕೆರೆ | ಹಿಂದುಳಿದ 'ಅ' ವರ್ಗ (ಮಹಿಳೆ) | ಸಾಮಾನ್ಯ |
| 9 | ಕೊಂಡದಹಳ್ಳಿ | ಹಿಂದುಳಿದ 'ಅ' ವರ್ಗ (ಮಹಿಳೆ) | ಸಾಮಾನ್ಯ |
| 10 | ಹೊನ್ನೇಬಾಗಿ | ಹಿಂದುಳಿದ 'ಅ' ವರ್ಗ (ಮಹಿಳೆ) | ಅನುಸೂಚಿತ ಪಂಗಡ |
| 11 | ದೇವರಹಳ್ಳಿ | ಹಿಂದುಳಿದ 'ಬ' ವರ್ಗ | ಅನುಸೂಚಿತ ಜಾತಿ (ಮಹಿಳೆ) |
| 12 | ಕೆರೆಬಿಳಚಿ | ಹಿಂದುಳಿದ 'ಬ' ವರ್ಗ | ಅನುಸೂಚಿತ ಜಾತಿ |
| 13 | ಕತ್ತಲಗೆರೆ | ಸಾಮಾನ್ಯ | ಅನುಸೂಚಿತ ಪಂಗಡ (ಮಹಿಳೆ) |
| 14 | ಬೆಳಲಗೆರೆ | ಸಾಮಾನ್ಯ | ಅನುಸೂಚಿತ 'ಅ' ವರ್ಗ(ಮಹಿಳೆ) |
| 15 | ದಾಗಿನಕಟ್ಟೆ | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 16 | ಗುಡ್ಡದ ಕೊಮಾರನಹಳ್ಳಿ | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 17 | ಕೋಗಲೂರು | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 18 | ಕಬ್ಬಳ | ಸಾಮಾನ್ಯ | ಅನುಸೂಚಿತ ಪಂಗಡ (ಮಹಿಳೆ) |
| 19 | ಕಗತೂರು | ಸಾಮಾನ್ಯ | ಅನುಸೂಚಿತ ಜಾತಿ (ಮಹಿಳೆ) |
| 20 | ಸಿದ್ದನಮಠ | ಸಾಮಾನ್ಯ | ಅನುಸೂಚಿತ ಜಾತಿ (ಮಹಿಳೆ) |
| 21 | ಸಂತೇಬೆನ್ನೂರು | ಸಾಮಾನ್ಯ | ಅನುಸೂಚಿತ ಜಾತಿ (ಮಹಿಳೆ) |
| 22 | ಚನ್ನೇಶಪುರ | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 23 | ಹರೋನಹಳ್ಳಿ | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 24 | ಮಲಹಾಳು | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 25 | ಪಾಂಡೋಮಟ್ಟಿ | ಸಾಮಾನ್ಯ | ಅನುಸೂಚಿತ 'ಬ' ವರ್ಗ(ಮಹಿಳೆ) |
| 26 | ಇಟ್ಟಿಗಿ | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 27 | ಕಂಸಾಗರ | ಸಾಮಾನ್ಯ | ಸಾಮಾನ್ಯ |
| 28 | ಕೋಟೆಹಾಳ್ | ಸಾಮಾನ್ಯ (ಮಹಿಳೆ) | ಅನುಸೂಚಿತ 'ಅ'ವರ್ಗ(ಮಹಿಳೆ) |
| 29 | ನಿಲೋಗಲ್ | ಸಾಮಾನ್ಯ (ಮಹಿಳೆ) | ಅನುಸೂಚಿತ ಜಾತಿ |
| 30 | ತ್ಯಾವಣಗಿ | ಸಾಮಾನ್ಯ (ಮಹಿಳೆ) | ಅನುಸೂಚಿತ ಜಾತಿ |
| 31 | ಮೆದಿಕೆರೆ | ಸಾಮಾನ್ಯ (ಮಹಿಳೆ) | ಸಾಮಾನ್ಯ |
| 32 | ತಣಿಗೆರೆ | ಸಾಮಾನ್ಯ (ಮಹಿಳೆ) | ಅನುಸೂಚಿತ 'ಅ' ವರ್ಗ |
| 33 | ಕೆಂಪನಹಳ್ಳಿ | ಸಾಮಾನ್ಯ (ಮಹಿಳೆ) | ಸಾಮಾನ್ಯ |
| 34 | ದೊಡ್ಡಬ್ಬಿಗೆರೆ | ಸಾಮಾನ್ಯ (ಮಹಿಳೆ) | ಅನುಸೂಚಿತ ಪಂಗಡ |
| 35 | ಅಗರಬನ್ನಿಹಟ್ಟಿ | ಸಾಮಾನ್ಯ (ಮಹಿಳೆ) | ಸಾಮಾನ್ಯ |
| 36 | ಅಜ್ಜಿಹಳ್ಳಿ | ಸಾಮಾನ್ಯ (ಮಹಿಳೆ) | ಅನುಸೂಚಿತ 'ಬ' ವರ್ಗ |
| 37 | ಹೆಬ್ಬಳಗೆರೆ | ಸಾಮಾನ್ಯ (ಮಹಿಳೆ) | ಅನುಸೂಚಿತ ಜಾತಿ |
| 38 | ಹಿರೇಮಳಲಿ | ಸಾಮಾನ್ಯ (ಮಹಿಳೆ) | ಅನುಸೂಚಿತ ಜಾತಿ |
| 39 | ಗರಗ | ಸಾಮಾನ್ಯ (ಮಹಿಳೆ) | ಸಾಮಾನ್ಯ |
| 40 | ಲಿಂಗದಹಳ್ಳಿ | ಸಾಮಾನ್ಯ (ಮಹಿಳೆ) | ಸಾಮಾನ್ಯ |
| 41 | ಹೊದಿಗೆರೆ | ಸಾಮಾನ್ಯ (ಮಹಿಳೆ) | ಸಾಮಾನ್ಯ |
| 42 | ಗೊಪ್ಪೇನಹಳ್ಳಿ | ಸಾಮಾನ್ಯ (ಮಹಿಳೆ) | ಅನುಸೂಚಿತ 'ಅ' ವರ್ಗ |
| 43 | ನೆಲ್ಲಿಹಂಕಲು | ಸಾಮಾನ್ಯ (ಮಹಿಳೆ) | ಅನುಸೂಚಿತ ಪಂಗಡ |
| 44 | ಕಣಿವೆಬಿಳಚಿ | ಅನುಸೂಚಿತ ಜಾತಿ | ಸಾಮಾನ್ಯ (ಮಹಿಳೆ) |
| 45 | ಸೋಮಲಾಪುರ | ಅನುಸೂಚಿತ ಜಾತಿ | ಸಾಮಾನ್ಯ (ಮಹಿಳೆ) |
| 46 | ಬೆಳ್ಳಿಗನೂಡು | ಅನುಸೂಚಿತ ಜಾತಿ | ಸಾಮಾನ್ಯ (ಮಹಿಳೆ) |
| 47 | ಕರೆಕಟ್ಟೆ | ಅನುಸೂಚಿತ ಜಾತಿ | ಅನುಸೂಚಿತ 'ಅ' ವರ್ಗ(ಮಹಿಳೆ) |
| 48 | ಮುದಿಗೆರೆ | ಅನುಸೂಚಿತ ಜಾತಿ | ಅನುಸೂಚಿತ 'ಅ' ವರ್ಗ(ಮಹಿಳೆ) |
| 49 | ದುರ್ವಿಗೆರೆ | ಅನುಸೂಚಿತ ಜಾತಿ | ಸಾಮಾನ್ಯ (ಮಹಿಳೆ) |
| 50 | ಚಿಕ್ಕಗಂಗೂರು | ಅನುಸೂಚಿತ ಜಾತಿ (ಮಹಿಳೆ) | ಅನುಸೂಚಿತ 'ಅ' ವರ್ಗ |
| 51 | ನುಗ್ಗಿಹಳ್ಳಿ | ಅನುಸೂಚಿತ ಜಾತಿ (ಮಹಿಳೆ) | ಅನುಸೂಚಿತ 'ಅ' ವರ್ಗ |
| 52 | ಕಾಕನೂರು | ಅನುಸೂಚಿತ ಜಾತಿ (ಮಹಿಳೆ) | ಸಾಮಾನ್ಯ |
| 53 | ಜೋಳದಾಳು | ಅನುಸೂಚಿತ ಜಾತಿ (ಮಹಿಳೆ) | ಸಾಮಾನ್ಯ |
| 54 | ನಲ್ಲೂರು | ಅನುಸೂಚಿತ ಜಾತಿ (ಮಹಿಳೆ) | ಅನುಸೂಚಿತ 'ಅ' ವರ್ಗ(ಮಹಿಳೆ) |
| 55 | ಕಂಚಿಗನಾಳು | ಅನುಸೂಚಿತ ಜಾತಿ (ಮಹಿಳೆ) | ಸಾಮಾನ್ಯ |
| 56 | ನಲ್ಕುದುರೆ | ಅನುಸೂಚಿತ ಪಂಗಡ | ಸಾಮಾನ್ಯ (ಮಹಿಳೆ) |
| 57 | ಮಲ್ಲಾಪುರ | ಅನುಸೂಚಿತ ಪಂಗಡ | ಸಾಮಾನ್ಯ (ಮಹಿಳೆ) |
| 58 | ರುದ್ರಾಪುರ | ಅನುಸೂಚಿತ ಪಂಗಡ | ಸಾಮಾನ್ಯ (ಮಹಿಳೆ) |
| 59 | ರಾಜಗೊಂಡನಹಳ್ಳಿ | ಅನುಸೂಚಿತ ಪಂಗಡ (ಮಹಿಳೆ) | ಸಾಮಾನ್ಯ |
| 60 | ಮರವಂಜಿ | ಅನುಸೂಚಿತ ಪಂಗಡ (ಮಹಿಳೆ) | ಸಾಮಾನ್ಯ |
| 61 | ತಾವರೆಕೆರೆ | ಅನುಸೂಚಿತ ಪಂಗಡ (ಮಹಿಳೆ) | ಅನುಸೂಚಿತ 'ಅ' ವರ್ಗ |

## ನಗರದಲ್ಲಿ ಇಂದು ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಜಿಲ್ಲಾಡಳಿತ, ಮಹಾನಗರ ಪಾಲಿಕೆ, ತೋಟಗಾರಿಕೆ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 7 ರಿಂದ 8 ರವರೆಗೆ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದಲ್ಲಿ 'ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ' ಕಾರ್ಯಕ್ರಮ ಏರ್ಪಡಿಸಲಾಗಿದೆ.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಬಿ. ಗೀತಾ ಕಾರ್ಯಕ್ರಮವನ್ನು ಉದ್ಘಾಟಿಸುವರು. ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಪಿ. ಬಸವರಾಜು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಪ್ರವೀಣ್ ನಾಯಕ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶಶಿಕಲಾ ಮತ್ತಿತರರು ಪಾಲ್ಗೊಳ್ಳುವರು.

# ನಾಳೆ ಪಲ್ಸ್ ಪೋಲಿಯೋ ಅಭಿಯಾನ



ದಾವಣಗೆರೆ ಜ. 29 - ನಾಡಿದ್ದು ದಿನಾಂಕ 31 ರಂದು ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಅಭಿಯಾನ ನಡೆಯಲಿದ್ದು ವಿವಿಧ ಇಲಾಖೆಗಳು ಸಹಕಾರ ನೀಡುವ ಮೂಲಕ ಈ ಅಭಿಯಾನವನ್ನು ಯಶಸ್ವಿಗೊಳಿಸಬೇಕೆಂದು ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ ಹೇಳಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಶುಕ್ರವಾರ ನಡೆದ 2020-21 ನೇ ಸಾಲಿನ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೋವಿಡ್ ಹಿನ್ನೆಲೆಯಲ್ಲಿ ಎಲ್ಲಾ ರೀತಿಯ ಮುಂಜಾಗರೂಕತಾ ಕ್ರಮಗಳನ್ನು ಅನುಸರಿಸಬೇಕೆಂದು ನಿರ್ದೇಶಿಸಿದರು.

ಈಗಾಗಲೇ ಪೋಲಿಯೋ ಲಸಿಕೆ ಜಿಲ್ಲೆಗೆ ಸರಬರಾಜು ಆಗಿದ್ದು ತಾಲ್ಲೂಕು ಕೇಂದ್ರಗಳಿಗೆ ಕಳುಹಿಸಿಕೊಡಲಾಗಿದೆ. ಲಸಿಕಾ ಅಭಿಯಾನದಲ್ಲಿ ತೊಡಗಿಕೊಂಡಿರುವ ಸಿಬ್ಬಂದಿಗಳು ಅಂದು ಬೆಳಿಗ್ಗೆ 8 ರೊಳಗೆ ಬೂತ್‌ಗಳಲ್ಲಿ ಲಭ್ಯವಿದ್ದು ಸಂಜೆ 5.30 ರವರೆಗೆ ಹಾಗೂ ಮುಂದಿನ ಮೂರು ದಿನಗಳು ಮನೆ ಮನೆಗೆ ತೆರಳಿ ಬೂತ್ ಗೆ ಬರಲು ಆಗದೇ ಇರುವ ಮಕ್ಕಳಿಗೆ ಲಸಿಕೆ ನೀಡಬೇಕು ಮತ್ತು ವಲಸಿಗ ಮಕ್ಕಳಿಗೂ ತಪ್ಪದೇ ಲಸಿಕೆ ನೀಡುವಂತೆ ಅವರು ಸೂಚಿಸಿದರು.

ಆರ್ ಸಿ ಹೆಚ್ ಅಧಿಕಾರಿ ಡಾ.ಮೀನಾಕ್ಷಿ ಮಾತನಾಡಿ, ನಾಡಿದ್ದು ದಿನಾಂಕ 31 ರಂದು ಬೂತ್‌ಗಳಲ್ಲಿ 0 ಯಿಂದ 5 ವಯಸ್ಸಿನ ಮಕ್ಕಳಿಗೆ ಪೋಲಿಯೋ ಲಸಿಕೆಯನ್ನು ಹಾಕಲಾಗುವುದು ಹಾಗೂ ಫೆಬ್ರವರಿ 1 ರಿಂದ ಫೆಬ್ರವರಿ 03 ರವರೆಗೆ ಒಟ್ಟು ಮೂರು ದಿನಗಳು ಮನೆ ಮನೆಗೆ ಭೇಟಿ ಮಾಡಿ ಬೂತ್ ನಲ್ಲಿ ಬಿಟ್ಟು ಹೋದ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲಾಗುವುದು ಎಂದರು.

ಪ್ರತಿ ವರ್ಷದಂತೆ ಈ ಬಾರಿಯೂ ಪೋಲಿಯೋ ಅಭಿಯಾನವನ್ನು ಶೇ. 100 ರಷ್ಟು ಯಶಸ್ವಿಯಾಗುವಂತೆ ಯೋಜನೆ ರೂಪಿಸಲಾಗಿದ್ದು, ಗ್ರಾಮಾಂತರ 97918, ನಗರ ಪ್ರದೇಶ 58293 ಸೇರಿದಂತೆ ಒಟ್ಟು 1,56,211 ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲಾಗುವುದು ಮತ್ತು 1121 ಸ್ಥಿರ ಬೂತ್‌ಗಳು, 1132 ಟ್ರಾನ್ಸಿಟ್/ಮೊಬೈಲ್ ಬೂತ್‌ಗಳಲ್ಲಿ ಲಸಿಕೆ ಹಾಕಲಾಗುವುದು ಎಂದು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಪೋಲಿಯೋ ಲಸಿಕೆ ಮತ್ತು ಕುಷ್ಠರೋಗ ಅರಿವು ಆಂದೋಲನದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು.

ಸಭೆಯಲ್ಲಿ ಉಪ ವಿಭಾಗಾಧಿಕಾರಿ ಮಮತ ಹೊಸಗೌಡರ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಆನಂದ್, ಡಿಹೆಚ್‌ಓ ಡಾ. ನಾಗರಾಜ್, ಜಿಲ್ಲಾಸ್ಪತ್ರೆ ಅಧೀಕ್ಷಕ ಡಾ. ಜಯಪ್ರಕಾಶ್, ಕುಟುಂಬ ಕಲ್ಯಾಣಾಧಿಕಾರಿ ಡಾ. ರೇಣುಕಾರಾಧ್ಯ, ಡಿಎಲ್‌ಓ ಡಾ. ಮುರಳೀಧರ್, ಜಿಲ್ಲಾ ಆಯುಷ್ ಅಧಿಕಾರಿ ಶಂಕರೇಗೌಡ, ಡಿಡಿಪಿಯು ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

## ದಾವಣಗೆರೆ ವಿವಿಯಲ್ಲಿ ಇಂದು ರಂಗ ವಿಮರ್ಶಾ ಕಮ್ಮಟ

ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ವತಿಯಿಂದ ದಾವಣಗೆರೆ ವಿಶ್ವವಿದ್ಯಾನಿಲಯ, ಜಿಲ್ಲಾ ವರದಿಗಾರರ ಕೂಟ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಇಂದು ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಪತ್ರಕರ್ತರು, ಪತ್ರಿಕೋದ್ಯಮ ವಿದ್ಯಾರ್ಥಿಗಳು ಹಾಗೂ ಆಸಕ್ತ ಬರಹಗಾರರಿಗಾಗಿ ರಂಗ ವಿಮರ್ಶಾ ಕಮ್ಮಟವನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 10.30 ಕ್ಕೆ ನಡೆಯುವ ಗೋಷ್ಠಿಯಲ್ಲಿ 'ಲಿಖಿತ ಪಠ್ಯ-ರಂಗ ಪಠ್ಯ ಮತ್ತು ವಿಮರ್ಶೆಯ ಹಾದಿ' ವಿಷಯ ಕುರಿತು ಮತ್ತು ಮಧ್ಯಾಹ್ನ 2.30 ಕ್ಕೆ ನಡೆಯುವ ಎರಡನೇ ಗೋಷ್ಠಿಯಲ್ಲಿ ನೀನಾಸಮ್ ತಿರುಗಾಟ 2018 ಇವ ರಿಂದ ಆಶ್ಚರ್ಯ ಚೂಡಾಮಣಿ ನಾಟಕದ ವಿಡಿಯೋ ಪ್ರದರ್ಶನವಿರುತ್ತದೆ.

ಮಧ್ಯಾಹ್ನ 12.30 ಕ್ಕೆ ದಾವಿವಿ ಕುಲಪತಿ ಪ್ರೊ.ಎಸ್.ವಿ.ಹಲಸೆ ಕಾರ್ಯಕ್ರಮವನ್ನು ಉದ್ಘಾಟಿಸುವರು. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಪ್ರೊ. ಆರ್ ಭೀಮಸೇನ ಅಧ್ಯಕ್ಷತೆ ವಹಿಸುವರು. ಸಿನೆಮಾ ನಿರ್ದೇಶಕ ಬಿ.ಸುರೇಶ್, ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ, ವಾರ್ತಾಧಿಕಾರಿ ಡಿ.ಅಶೋಕಕುಮಾರ್, ರಂಗ ಸಮಾಜದ ಸದಸ್ಯ ಪ್ರಭುದೇವ ಕಪ್ಪಗಲ್ಲು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭವಿದ್ದು, ಪ್ರೊ. ಬಸವರಾಜ ಬಣಕಾರ ಸಮಾರೋಪ ನುಡಿ ನುಡಿವರು. ಹಿರಿಯ ಪತ್ರಕರ್ತ ಬಾ.ಮ.ಬಸವರಾಜಯ್ಯ ಪ್ರಮಾಣ ಪತ್ರ ವಿತರಣೆ ಮಾಡುವರು.

ಸಿಂಡಿಕೇಟ್ ಸದಸ್ಯರಾದ ವಿಜಯಲಕ್ಷ್ಮಿ ಹಿರೇಮಠ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

## ಎಸ್.ಎಸ್. ಕೇರ್ ಟ್ರಸ್ಟ್ : ನಗರದಲ್ಲಿಂದು ಡಯಾಲಿಸಿಸ್ ಕೇಂದ್ರದ ಉದ್ಘಾಟನೆ

ಬಾಪೂಜಿ ವಿದ್ಯಾಸಂಸ್ಥೆಯ ಎಸ್.ಎಸ್. ಕೇರ್ ಟ್ರಸ್ಟ್‌ನಿಂದ ಮೂತ್ರಪಿಂಡ ರೋಗಿಗಳಿಗಾಗಿ ಅತ್ಯಾಧುನಿಕ ಡಯಾಲಿಸಿಸ್ ಕೇಂದ್ರವನ್ನು ಹಳೆ ದಾವಣಗೆರೆ ಮಾಗಾ ನಹಳ್ಳಿ ರಸ್ತೆಯಲ್ಲಿರುವ (ಕೆ.ಆರ್. ರಸ್ತೆ) ಎಸ್.ಎಸ್. ಜನರಲ್ ಆಸ್ಪತ್ರೆಯಲ್ಲಿ ಇಂದಿನಿಂದ ಆರಂಭಿಸಲಾಗುತ್ತಿದೆ.

ಇಂದು ಸಂಜೆ 5.30ಕ್ಕೆ ಎಸ್.ಎಸ್. ಕೇರ್ ಟ್ರಸ್ಟ್‌ನ ಛೇರ್ಮನ್ ಡಾ. ಶಾಮನೂರು ಶಿವಶಂಕರಪ್ಪ ಅವರು ಡಯಾಲಿಸಿಸ್ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ. ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಜಂಟಿ ಕಾರ್ಯದರ್ಶಿ ಶಾಮನೂರು ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದಾರೆ.

**ಎಸ್.ಎಸ್. ಕೇರ್ ಟ್ರಸ್ಟ್** : ಡಾ. ಶಾಮನೂರು ಶಿವಶಂಕರಪ್ಪನವರ ಆಶಯದಂತೆ ಬಡವರು, ಆರ್ಥಿಕವಾಗಿ ಹಿಂದುಳಿದ ಸಮುದಾಯದವರ ಏಳಿಗೆಗಾಗಿ, ಅವರ ಆರೋಗ್ಯ ರಕ್ಷಣೆಗಾಗಿ 2020 ರಲ್ಲಿ ಎಸ್.ಎಸ್. ಕೇರ್ ಟ್ರಸ್ಟ್ ಆರಂಭಿಸಲಾಯಿತು.

ಮಹಿಳೆಯರು ಮತ್ತು ಮಕ್ಕಳ ಆರೋಗ್ಯವನ್ನು ಮುಖ್ಯವಾಗಿರಿಸಿಕೊಂಡು ಅವರಿಗೆ ಆರೋಗ್ಯ, ಶಿಕ್ಷಣ ಮತ್ತು ಚಿಕಿತ್ಸೆ ಕಲ್ಪಿಸುವ ಮುಖ್ಯ ಉದ್ದೇಶವನ್ನು ಟ್ರಸ್ಟ್ ಹೊಂದಿದೆ. ಡಯಾಬಿಟೀಸ್, ಬಿಪಿ, ಕ್ಯಾನ್ಸರ್, ಹೃದಯ ರೋಗಗಳು, ಕಿಡ್ನಿ ಸಮಸ್ಯೆಗಳು ಇವೆಲ್ಲಕ್ಕೂ ಉತ್ತಮ ಚಿಕಿತ್ಸೆ ದೊರಕಿಸಿಕೊಡಲು ಟ್ರಸ್ಟ್ ಕಾರ್ಯನಿರತವಾಗಿದೆ. ಇದೀಗ ಕೆ.ಆರ್. ರಸ್ತೆಯ ಎಸ್.ಎಸ್. ಜನರಲ್ ಆಸ್ಪತ್ರೆಯಲ್ಲಿ ಇಂದು ಡಯಾಲಿಸಿಸ್ ಕೇಂದ್ರ ಆರಂಭಗೊಳ್ಳುತ್ತಿದೆ.

## ನಗರದಲ್ಲಿ ಇಂದು ಶೈಕ್ಷಣಿಕ ಕಾರ್ಯಾಗಾರ

ದಾವಣಗೆರೆ, ಜ.29-ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ವತಿಯಿಂದ ನಾಳೆ ದಿನಾಂಕ 30ರ ಶನಿವಾರ ಜಿಲ್ಲಾ ಮಟ್ಟದ ಶೈಕ್ಷಣಿಕ ಕಾರ್ಯಾ ಗಾರ, ಜಿಲ್ಲಾ ಕಾರ್ಯಕಾರಿಣಿ ಸಭೆ, ನೂತನ ಪದಾಧಿಕಾರಿಗಳ ಅಭಿನಂದನೆ ಹಾಗೂ ಸಂಕಲ್ಪ ಪಂಚವಾರ್ಷಿಕ ಕ್ರಿಯಾಯೋ ಜನೆ ಬಿಡುಗಡೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಡಿ. ರಾಮಪ್ಪ ತಿಳಿಸಿದರು.

ಇಂದಿಲ್ಲಿ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ನಗರದ ಸರ್ಕಾರಿ ನೌಕರರ ಭವನದಲ್ಲಿ ಬೆಳಿಗ್ಗೆ 10.30ಕ್ಕೆ ನಗರಾಭಿವೃದ್ಧಿ ಸಚಿವ ಬಿ.ಎ. ಬಸ ವರಾಜ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರು ಗಳಾದ ಎಂ.ಪಿ. ರೇಣುಕಾ ಚಾರ್ಯ, ಕೆ.ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ.ಎನ್. ಲಿಂಗಣ್ಣ, ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಕೆ.ವಿ. ಶಾಂತಕುಮಾರಿ ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎ.ರವೀಂದ್ರನಾಥ್ ಮುಂತಾದ ಗಣ್ಯರು ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಗೌರ ವಾಧ್ಯಕ್ಷ ಎಂ.ಸಿದ್ದೇಶಿ, ಪ್ರಧಾನ ಕಾರ್ಯದರ್ಶಿ ಪಿ.ಆರ್. ಜಗದೀಶ್, ಉಪಾಧ್ಯಕ್ಷ ಆರ್.ಜಿ. ಅಜ್ಜಯ್ಯ, ಖಜಾಂಚಿ ಜೆ.ಆರ್. ಶಿವಲಿಂಗಪ್ಪ, ಸಂಘಟನಾ ಕಾರ್ಯದರ್ಶಿ ಎಸ್. ಆನಂದಪ್ಪ ಉಪಸ್ಥಿತರಿದ್ದರು.

## ನಗರದಲ್ಲಿಂದು ಸಾಂಸ್ಕೃತಿಕ ಕಾರ್ಯಕ್ರಮ

ತಿಂಗಳ ಅಂಗಳ ಸಾಹಿತ್ಯ ಮತ್ತು ಸಾಂಸ್ಕೃತಿಕ ಬಳಗದ ವತಿಯಿಂದ ಲೇಖಕಿ ಶ್ರೀಮತಿ ಸಂಧ್ಯಾ ಸುರೇಶ್ ಅವರ ಆತಿಥ್ಯದಲ್ಲಿ ಇಂದು ಸಂಜೆ 4 ರಿಂದ 6 ರವರೆಗೆ ಸಾಹಿತ್ಯ-ಸಾಂಸ್ಕೃತಿಕ ಸಮ್ಮಿಲನ ಕಾರ್ಯಕ್ರಮ ಆಯೋಜಿಸಲಾಗಿದೆ .

ಶ್ರೀಮತಿ ಸಂಧ್ಯಾ ಸುರೇಶ್ ಅವರ 'ಸಂಧ್ಯಾ - ಸೂರ್ಯ' ಸದನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಶ್ರೀಮತಿ ಮಹಾದೇವಮ್ಮ ಅವರಿಂದ ಗೀತ ಗಾಯನ, ಗಂಗಾಧರ ಬಿ.ಎಲ್ ನಿಟ್ಟೂರ್ ಅವರಿಂದ ಪ್ರಾರ್ಥನಾ ನೃತ್ಯ ಹಾಗೂ ಲೇಖಕ ಪಾಪು ಗುರು ಅವರಿಂದ ಸಂಧ್ಯಾ ಸುರೇಶ್ ಅವರ 'ಶ್ರೀ ಕೃಷ್ಣನ ಪಾಂಚಜನ್ಯ' ಕಥಾ ಸಂಕಲನದ ಒಂದು ಕಥಾವಲೋಕನ ನಡೆಯಲಿದೆ.

## ಮರಾಠ ಪರಿಷತ್ ಗ್ರಾಪಂ ಸದಸ್ಯರಿಗೆ ಅಭಿನಂದನೆ

ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಜಿಲ್ಲಾ ಘಟಕ ದಿಂದ ಜಿಲ್ಲೆಯ ಗ್ರಾಮ ಪಂಚಾಯ್ತಿಯಲ್ಲಿ ಚುನಾಯಿತರಾದ ಸದಸ್ಯರಿಗೆ ಇಂದು ಅಭಿನಂದನಾ ಸಮಾರಂಭ ನಡೆಯಲಿದೆ.

ಶ್ರೀ ಕೃಷ್ಣಭವಾನಿ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹರಿಹರ ಮರಾಠ ಸಮಾಜದ ಅಧ್ಯಕ್ಷ ಜಿ.ಹೆಚ್. ಮರಿಯೋಜಿರಾವ್ ಗಡದೆ ವಹಿಸಲಿದ್ದು, ಮರಾಠ ವಿದ್ಯಾವರ್ಧಕ ಸಂಘದ ಅಧ್ಯಕ್ಷ, ದೂಡಾ ಮಾಜಿ ಅಧ್ಯಕ್ಷ ಡಿ. ಮಾಲತೇಶ್ ರಾವ್ ಜಾಧವ್, ದೂಡಾ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ಕೆಕೆಎಂಪಿ ಮಹಿಳಾ ಜಿಲ್ಲಾಧ್ಯಕ್ಷೆ ನಳಿನಾ ಪವರ್, ಚೇತನಾ ಶಿವಕುಮಾರ್ ಎನ್.ಎಸ್, ಕೃಷ್ಣರಾವ್ ಸಾವಂತ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.


## ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.

ಮಾನ್ಯರೇ,

ದಿ ದಾವಣಗೆರೆ ಕ್ಲಬ್‌ನ ಆಡಳಿತ ಮಂಡಳಿ ಸದಸ್ಯರ 2020-2021 ರಿಂದ 2022-2023 ರವರೆಗೆ 3 ವರ್ಷಗಳ ಅವಧಿಗೆ ನಡೆಯಲಿರುವ ಚುನಾವಣೆಯಲ್ಲಿ **ಶ್ರೀ ಮತ್ತಿಹಳ್ಳಿ ವೀರಣ್ಣ**, ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು, ದಿ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕ್ ಲಿ., ಇವರ ನೇತೃತ್ವದಲ್ಲಿ ನಾವುಗಳು 11 ಜನ ವಿವಿಧ ಸ್ಥಾನಗಳಿಗೆ ಸ್ಪರ್ಧಿಸಿರುತ್ತೇವೆ. ಕ್ಲಬ್‌ನ ಸರ್ವತೋಮುಖ ಅಭಿವೃದ್ಧಿಗಾಗಿ ತಾವುಗಳು ತಮ್ಮ ಅತ್ಯಮೂಲ್ಯವಾದ ಮತಗಳನ್ನು ಕೆಳಕಂಡ ನಮಗೆ ನೀಡಿ ನಮ್ಮನ್ನು ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ವಿನಂತಿ.

| ಕ್ರ.ಸಂ. | ಉಮೇದುದಾರರ ಹೆಸರು | ಸ್ಥಾನ | ಭಾವಚಿತ್ರ | ಗುರುತು | ಮೊಹರು |
|---|---|---|---|---|---|
| 1 | ಮತ್ತಿಹಳ್ಳಿ ವೀರಣ್ಣ | ಅಧ್ಯಕ್ಷ | | | |
| 1 | ಚಂದ್ರಶೇಖರ್ ಎ.ಬಿ. (ABC) | ಉಪಾಧ್ಯಕ್ಷ | | | |
| 2 | ರಾಜಶೇಖರ್ ಎಂ.ಕೆ. (ಕೈದಾಳೆ ರಾಜು) | ಗೌರವ ಕಾರ್ಯದರ್ಶಿ | | | |
| 1 | ಉಳವಯ್ಯ ಎಸ್.ಜಿ. | ಗೌರವ ಸಹ ಕಾರ್ಯದರ್ಶಿ | | | |
| 2 | ಲಿಂಗರಾಜ್ ವಾಲಿ ಹೆಚ್.ಸಿ. | ಕೋಶಾಧ್ಯಕ್ಷ | | | |
| ನಿರ್ದೇಶಕರ ಸ್ಥಾನಗಳು | | | | | |
| 2 | ಕೊಟ್ರೇಶ್ ಎನ್. (ANK) | | | | |
| 4 | ಜಯರಾಜ್ ಎಸ್. ಕಶೆಟ್ಟರ್ | | | | |
| 7 | ಪ್ರಶಾಂತ ಗುಪ್ತಾ ಎಸ್.ಕೆ. | | | | |
| 12 | ರುದ್ರೇಶ್ ಹೆಚ್.ವಿ. | | | | |
| 13 | ಶ್ರೀನಿವಾಸಮೂರ್ತಿ ಆರ್.ಜಿ. | | | | |
| 14 | ಶಿವಯೋಗಿ ಬಿ.ವಿ. (ಬೂಸ್ನೂರ್) | | | | |

ವಿ.ಸೂ. : ಒಬ್ಬ ಸದಸ್ಯರು ಒಂದೊಂದರಂತೆ ಅಧ್ಯಕ್ಷ, ಉಪಾಧ್ಯಕ್ಷ, ಗೌರವ ಕಾರ್ಯದರ್ಶಿ, ಗೌರವ ಸಹ ಕಾರ್ಯದರ್ಶಿ, ಕೋಶಾಧ್ಯಕ್ಷ ಸ್ಥಾನಗಳಿಗೆ ಮತ್ತು 6 ನಿರ್ದೇಶಕ ಸ್ಥಾನಗಳಿಗೆ ತಲಾ ಒಂದರಂತೆ ಒಟ್ಟು 11 ಮತಗಳನ್ನು ಚಲಾಯಿಸತಕ್ಕದ್ದು.

ಮತದಾನದ ದಿನಾಂಕ : 31-01-2021ನೇ ಭಾನುವಾರ ಮತದಾನದ ಸ್ಥಳ : ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.

ಮತದಾನ ಸಮಯ : ಬೆಳಿಗ್ಗೆ 9-00 ರಿಂದ ಮಧ್ಯಾಹ್ನ 3-00 ರವರೆಗೆ

# ಮೀಸಲಾತಿಗಾಗಿ ಕ್ರಾಂತಿ ಧ್ವನಿ, ಹೋರಾಟಕ್ಕೆ ಕಿಚ್ಚು, ಬಾರ್‌ಕೋಲ್



ದಾವಣಗೆರೆ, ಜ. 29 – ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೊಟ್ಟರೆ ಈ ಸಮಾಜದ ಮಕ್ಕಳು ಬುದ್ಧಿವಂತರಾಗುತ್ತಾರೆ, ಉದ್ಯೋಗ ಪಡೆದು ಬೆಳೆಯುತ್ತಾರೆ ಎಂಬ ಹೊಟ್ಟೆಕಿಚ್ಚಿನಿಂದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮೀಸಲಾತಿಗೆ ಹಿಂದೆ ಮುಂದೆ ನೋಡುತ್ತಿದ್ದಾರೆ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಆರೋಪಿಸಿದ್ದಾರೆ.

ಲಿಂಗಾಯತ ಪಂಚಮಸಾಲಿ 2ಎ ಮೀಸಲಾತಿಗಾಗಿ ಕೂಡಲಸಂಗಮದಿಂದ ಶ್ರೀಗಳು ಆರಂಭಿಸಿರುವ ಪಾದಯಾತ್ರೆ ದಾವಣಗೆರೆಗೆ ತಲುಪಿದ ಸಂದರ್ಭದಲ್ಲಿ ನಗರದ ಬೀರಲಿಂಗೇಶ್ವರ ಮೈದಾನದಲ್ಲಿ ಜಿಲ್ಲಾ ಲಿಂಗಾಯತ ಪಂಚಮಸಾಲಿ ಸಮಾಜದ ವತಿಯಿಂದ ಆಯೋಜಿಸಲಾಗಿದ್ದ ಬಹಿರಂಗ ಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ನಾವು ಹಸಿರು ಶಾಲು ಹಾಕಿ ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡಿದ್ದೆವು. ನಮ್ಮ ಮುಖ್ಯಮಂತ್ರಿ ಎಂದುಕೊಂಡು ಇದುವರೆಗೂ ಶಾಂತಿಯಿಂದ ಹೋರಾಟ ಮಾಡಿದ್ದೆವು. ಆದರೆ, ನಾಳೆ ದಾವಣಗೆರೆಯಿಂದ ಹೆಗಲ ಮೇಲೆ ಶಾಲಿನ ಬದಲು ಬಾರ್‌ಕೋಲ್ ಬರಲಿದೆ. ಹೋರಾಟದ ಕಿಚ್ಚು ಬರಲಿದೆ ಎಂದು ಹೇಳಿದರು.

ದಕ್ಷಿಣ ಕರ್ನಾಟಕದ ವೈದಿಕ ಪರಂಪರೆಯ ಸ್ವಾಮೀಜಿ ಬೀದಿಗೆ ಬಂದಿದ್ದರೆ ಅವರು ಸುಮ್ಮನೆ ಇರುತ್ತಿರಲಿಲ್ಲ. ಆದರೆ, ಲಿಂಗಾಯತ ಸ್ವಾಮಿಗಳು ಬೀದಿಗೆ ಬಂದಿದ್ದಾರೆಂದು ಸುಮ್ಮನಿದ್ದಾರೆ. ಯಡಿಯೂರಪ್ಪಗೆ ವೋಟ್ ಕೊಡಿಸಲು ಮಾತ್ರ ಲಿಂಗಾಯತ ಸ್ವಾಮಿಗಳಿದ್ದಾರೆ ಎಂದು ಅವರು ಭಾವಿಸಿದ್ದಾರೆ. ಸಂದರ್ಭ ಬಂದರೆ ನಿಮ್ಮನ್ನು ಖಾಲಿ ಮಾಡಿಸಲು ನಾವು ಇದ್ದೇವೆ ಎಂದು ಶ್ರೀಗಳು ಎಚ್ಚರಿಸಿದ್ದಾರೆ.

ಮೀಸಲಾತಿಗಾಗಿ ಪಂಚಮಸಾಲಿ ಸಮಾಜದ ಶಾಸಕರು ರಾಜೀನಾಮೆ ನೀಡಬೇಕು ಎಂದರೆ ಸೂಕ್ತವಲ್ಲ. ಅದರ ಬದಲು, ಶಾಸಕರು ಯಡಿಯೂರಪ್ಪ ಮೇಲೆ ಒತ್ತಡ ಹಾಕಬೇಕು. ಅವರ ಒತ್ತಡಕ್ಕೆ ಯಡಿಯೂರಪ್ಪನವರೇ ರಾಜೀನಾಮೆ ಕೊಡುವ ಸಂದರ್ಭ ಬಂದು ಸಮಾಜಕ್ಕೆ ಮೀಸಲಾತಿ ಕಲ್ಪಿಸಬೇಕು ಎಂದು ಶ್ರೀಗಳು ಹೇಳಿದರು.

ಬೆಂಗಳೂರಿಗೆ 10 ಲಕ್ಷ ಜನ ಬರುತ್ತೇವೆ. ಸಂಘರ್ಷ ನಡೆಸುತ್ತೇವೆ. ಮೀಸಲಾತಿಯನ್ನು ಪಡೆಯುವುದಲ್ಲ ಕಿತ್ತುಕೊಳ್ಳುತ್ತೇವೆ ಎಂದು ಜಯಮೃತ್ಯುಂಜಯ ಶ್ರೀಗಳು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್ , ರಾಜ್ಯದಲ್ಲಿ ಪಂಚಮಸಾಲಿ ಸಮಾಜದ 17 ಶಾಸಕರಿದ್ದಾರೆ. ಆದರೂ ಸಮಾಜಕ್ಕಾಗಿ ಮೀಸಲಾತಿ ಕೇಳುತ್ತಿಲ್ಲ. ಇದರಿಂದಾಗಿ ಶ್ರೀಗಳು ಬೀದಿಗೆ ಬಂದು ಹೋರಾಟ ಮಾಡುವಂತಾಗಿದೆ. ಇದಕ್ಕಾಗಿ ಶಾಸಕರಿಗೆ ನಾಚಿಕೆಯಾಗಬೇಕು ಎಂದರು.

ದಾವಣಗೆರೆಯಲ್ಲಿ ಪಂಚಮಸಾಲಿ ಸಮಾಜವನ್ನು ತುಳಿಯುವ ಕೆಲಸ ನಡೆಯುತ್ತಿದೆ. ಇಲ್ಲಿ ಶಾಸಕ ಸ್ಥಾನಕ್ಕಾಗಿ ಯಾರೂ ಟಿಕೆಟ್ ಕೊಟ್ಟಿಲ್ಲ. ರಾಜಕೀಯವಾಗಿ ಬೆಳೆಯಲು ಸಮಾಜದವರು ಒಂದಾಗಬೇಕು ಎಂದೂ ಅವರು ಹೇಳಿದರು.

ಸಮಾಜದ ಮುಖಂಡರಾದ ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಮಾತನಾಡಿ, ಸಮಾಜದ ಬಡವರಿಗಾಗಿ ರಾಜ್ಯದಲ್ಲಿ 2ಎ ಮೀಸಲಾತಿ ಹಾಗೂ ಕೇಂದ್ರದಲ್ಲಿ ಒ.ಬಿ.ಸಿ. ಪಟ್ಟಿಯಲ್ಲಿ ಸೇರ್ಪಡೆಯಾಗಬೇಕಿದೆ. ನಮ್ಮನ್ನು ಇದುವರೆಗೂ ಒಡೆದು ಆಳಲಾಗಿದೆ. ಇದರಿಂದಾಗಿ ನಾವು ನಾಯಕರಾಗಲು ಸಾಧ್ಯವಾಗಿಲ್ಲ. ಸಂಘಟನೆಯಿಂದ ಹೋರಾಡಿದರೆ ಮಾತ್ರ ಜಯ ಸಾಧ್ಯ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪಾದಯಾತ್ರೆಯ ದಾವಣಗೆರೆ ಜಿಲ್ಲೆಯ ಸ್ವಾಗತ ಸಮಿತಿ ಗೌರವಾಧ್ಯಕ್ಷ ಹೆಚ್.ಎಸ್. ನಾಗರಾಜ್, ಯಡಿಯೂರಪ್ಪ ಮುಖ್ಯಮಂತ್ರಿಯಾಗಲು ನಮ್ಮ ಸಮಾಜದ ಕೊಡುಗೆ ಅಪಾರವಾಗಿದೆ. ಮೀಸಲಾತಿ ಕೊಡದೇ ಇದ್ದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ನುಗ್ಗುತ್ತೇವೆ ಎಂದು ಎಚ್ಚರಿಸಿದರು.

ವೇದಿಕೆಯ ಮೇಲೆ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ, ಬೆಂಗಳೂರಿನ ಸಂಗಮಾನಂದ ಸ್ವಾಮೀಜಿ, ಪಾಲಿಕೆ ಮೇಯರ್ ಹಾಗೂ ಪಾದಯಾತ್ರೆಯ ದಾವಣಗೆರೆ ಜಿಲ್ಲಾ ಸ್ವಾಗತ ಸಮಿತಿ ಅಧ್ಯಕ್ಷ ಬಿ.ಜಿ. ಅಜಯ್ ಕುಮಾರ್, ಸಮಾಜದ ಮುಖಂಡರಾದ ಗೌರಮ್ಮ ಕಾಶಪ್ಪನವರ್, ನಂದಿಹಳ್ಳಿ ಹಾಲಪ್ಪ, ಬಿ. ನಾಗನಗೌಡ್ರು, ಬಾವಿ ಬೆಟ್ಟಪ್ಪ, ಚಂದ್ರಶೇಖರ್ ಪೂಜಾರ್, ಶಿವರಾಜ್ ಪಾಟೀಲ್, ಅಣಜಿ ಚಂದ್ರಣ್ಣ, ವೀಣಾ ಕಾಶಪ್ಪನವರ್, ಹುಚ್ಚಪ್ಪ ಮೇಷ್ಟ್ರು, ಶ್ರೀಧರ್ ಪಾಟೀಲ್, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ರುದ್ರಕ್ಕ, ಮಲ್ಲಿಕಾರ್ಜುನ್, ಜಿಲ್ಲಾ ಪಂಚಾಯ್ತಿ ಸದಸ್ಯರಾದ ಕೆ.ಎಸ್. ಬಸವಂತಪ್ಪ, ತೇಜಸ್ವಿ ಪಟೇಲ್, ಯಜಮಾನ್ ಮೋತಿ ರಾಜೇಂದ್ರ ಮತ್ತಿತರರು ಉಪಸ್ಥಿತರಿದ್ದರು.

### ಕಾಶಪ್ಪನವರ್ ಕ್ರಾಂತಿ

ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್ ಅವರು ಶನಿವಾರ ದಾವಣಗೆರೆಯಲ್ಲಿ ಕ್ರಾಂತಿ ಮಾಡಲಿದ್ದಾರೆ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ.

ನಗರದಲ್ಲಿ 'ಬಾಂಬ್ ಸಿಡಿಸುವುದಾಗಿ' ಕಾಶಪ್ಪನವರ್ ಸಹ ಹೇಳಿದ್ದಾರೆ. ಆದರೆ, ಶನಿವಾರದ ಕ್ರಮ ಏನಾಗಿರಲಿದೆ ಎಂಬುದನ್ನು ಉಭಯರೂ ಗೌಪ್ಯವಾಗಿಟ್ಟಿದ್ದಾರೆ.

---

## ಇಸ್ರೇಲ್ ರಾಯಭಾರಿ ಕಚೇರಿ ಬಳಿ ಸ್ಫೋಟ

ನವದೆಹಲಿ, ಜ.29 – ರಾಜಧಾನಿ ದೆಹಲಿಯ ಇಸ್ರೇಲ್ ರಾಯಭಾರಿ ಕಚೇರಿ ಬಳಿ ಶುಕ್ರವಾರ ಕಡಿಮೆ ತೀವ್ರತೆಯ ಐಇಡಿ ಸ್ಫೋಟಗೊಂಡಿದ್ದು, ಘಟನೆಯಲ್ಲಿ ಐದಾರು ವಾಹನಗಳು ಜಖಂಗೊಂಡಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ದೆಹಲಿಯ ಔರಂಗಜೇಬ್ ರಸ್ತೆಯಲ್ಲಿರುವ ರಾಯಭಾರ ಕಚೇರಿಯಿಂದ ಕೇವಲ 50 ಮೀಟರ್ ದೂರದಲ್ಲಿ ಸ್ಫೋಟ ಸಂಭವಿಸಿದೆ.

ನಾವು ಈ ಬಗ್ಗೆ ಪರಿಶೀಲನೆ ನಡೆಸುತ್ತಿದ್ದೇವೆ. ಅನೇಕ ಪೊಲೀಸ್ ತಂಡಗಳನ್ನು ಸ್ಥಳಕ್ಕೆ ಕರೆಯಿಸಿಕೊಳ್ಳಲಾಗಿದೆ. ಯಾವ ರೀತಿಯ ವಸ್ತುಗಳಿಂದ ಸ್ಫೋಟ ಸಂಭವಿಸಿದೆ ಎಂದು ಇನ್ನೂ ಪತ್ತೆಯಾಗಿಲ್ಲ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸ್ಫೋಟದ ಹಿನ್ನೆಲೆಯಲ್ಲಿ ದೇಶದ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

---

# ಸಾಮಾನ್ಯ ಸಭೆಯಲ್ಲಿ ಕಣ್ಣೀರು ಹಾಕಿದ ತಾ.ಪಂ. ಸದಸ್ಯೆ

## ಬಾಗಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗದ್ದಕ್ಕೆ ಅಧಿಕಾರಿಗಳಿಗೆ ಧಿಕ್ಕಾರ



ಹರಪನಹಳ್ಳಿ, ಜ. 29- ಅವಧಿ ಮುಗಿಯುತ್ತಾ ಬಂದರೂ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸಾಧ್ಯವಾಗಿಲ್ಲ. ಹೇಳಿ ಹೇಳಿ ಸಾಕಾಯಿತು ಎಂದು ತಾ.ಪಂ ಸದಸ್ಯೆಯೊಬ್ಬರು ಕಣ್ಣೀರು ಹಾಕಿ ಅಧಿಕಾರಿಗಳಿಗೆ ಧಿಕ್ಕಾರ ಕೂಗಿದ ಘಟನೆ ಸಾಮಾನ್ಯ ಸಭೆಯಲ್ಲಿ ಜರುಗಿತು.

ಬಾಗಳಿ ಕ್ಷೇತ್ರದ ಸದಸ್ಯೆ ಲತಾ ಬಸವರಾಜ ಅವರು ಬಾಗಳಿ ಗ್ರಾಮದಲ್ಲಿ ಅರ್ಧ ಊರಿಗೆ ನೀರು ಬರುತ್ತದೆ. ಇನ್ನರ್ಧ ಊರಿಗೆ ನೀರು ಬರುತ್ತಿಲ್ಲ. ಅರ್ಧ ಊರಿಗೆ ಬರುತ್ತಿರುವ ನೀರಿನಲ್ಲೂ ಕಸ, ಕಡ್ಡಿ, ಜಂಡು, ಪಾಚಿ ಬರುತ್ತದೆ. ಇಂತಹ ನೀರು ಕುಡಿದರೆ ಜನರ ಆರೋಗ್ಯ ಏನಾಗುತ್ತದೆ ? ಎಂದು ಪ್ರಶ್ನಿಸಿದರು.

ದುಃಖದಿಂದ ಸುರಿಯತ್ತಿರುವ ಕಣ್ಣೀರನ್ನು ಒರೆಯಿಸಿಕೊಳ್ಳುತ್ತಲೇ ಮಾತನಾಡಿದ ಅವರು, ಇನ್ನು ಮೂರು ತಿಂಗಳಿಗೆ ನಮ್ಮ ಅವಧಿ ಮುಗಿಯುತ್ತದೆ. ನೀರಿನ ಸಮಸ್ಯೆ ಬಗೆಹರಿಸಲು ಸಾಧ್ಯವಾಗಲಿಲ್ಲ. ಅಧಿಕಾರಿಗಳಿಗೆ ಪ್ರತಿ ಸಭೆಯಲ್ಲೂ ಹೇಳಿ ಹೇಳಿ ಸಾಕಾಗಿ ಹೋಯಿತು. ಅಧಿಕಾರಿಗಳಿಗೆ ಧಿಕ್ಕಾರ ಎಂದು ಘೋಷಣೆ ಕೂಗಿದರು.

ಈ ಮಹಿಳಾ ಸದಸ್ಯೆಯ ಬೆಂಬಲಕ್ಕೆ ಸದಸ್ಯರಾದ ಮೈದೂರು ರಾಮಣ್ಣ, ಈರಣ್ಣ, ಪ್ರಕಾಶ ಧಾವಿಸಿ ಸಂಬಂಧ ಪಟ್ಟ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಆಗ ಕುಡಿಯುವ ನೀರು ನೈರ್ಮಲ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸಿದ್ದರಾಜು ಅವರು ಗ್ರಾಮಕ್ಕೆ ಭೇಟಿ ನೀಡಿ ಸರಿಪಡಿಸುತ್ತೇನೆ ಎಂದು ಭರವಸೆ ನೀಡಿದರು. ಇಂಜಿನಿಯರ ಉತ್ತರಕ್ಕೆ ಸಮಾಧಾನ ಗೊಳ್ಳದ ಲತಾ ಅವರು ಬರೀ ಇದೇ ಉತ್ತರ ನೀಡುತ್ತೀರಿ ಎಂದು ಪ್ರತಿಭಟಿಸಿದರು.

ಹರಪನಹಳ್ಳಿ ತಾಲ್ಲೂಕು ಫ್ಲೋರೈಡ್ ಮುಕ್ತ ಎಂದು ಸರ್ಕಾರ ಘೋಷಣೆ ಮಾಡಿದೆ. ಆದ್ದರಿಂದ ಹೊಸ ಶುದ್ದ ಕುಡಿಯುವ ನೀರಿನ ಘಟಕ ಸ್ಥಾಪನೆ ಇಲ್ಲ ಎಂದು ಎಇಇ ಸಿದ್ದರಾಜು ಸಭೆಯಲ್ಲಿ ತಿಳಿಸಿದಾಗ ಆಶ್ಚರ್ಯ ಚಕಿತರಾದ ಸದಸ್ಯ ಹುಣ್ಸೆಹಳ್ಳಿ ಪ್ರಕಾಶ್, ಮೈದೂರು ರಾಮಣ್ಣ ಅವರುಗಳು ಇನ್ನೂ ಫ್ಲೋರೈಡ್ ಮುಕ್ತವಾಗಿಲ್ಲ. ಕಡಬಗೇರಿ ಸೇರಿದಂತೆ ವಿವಿಧೆಡೆ ಶುದ್ದ ಕುಡಿಯುವ ನೀರಿನ ಘಟಕ ಅವಶ್ಯಕತೆ ಇದೆ ಎಂದು ವಾದಿಸಿದರು.

ತಾಲ್ಲೂಕಿನಲ್ಲಿ ಕೆರೆಗಳ ಒತ್ತುವರಿ ತೆರವುಗೊಳಿಸಿ ಎಂದು ಉಪಾಧ್ಯಕ್ಷ ಎಲ್. ಮಂಜಾನಾಯ್ಕ ಹಾಗೂ ಲತಾ ಒತ್ತಾಯಿಸಿದಾಗ ತಹಶೀಲ್ದಾರ್ ಎಲ್.ಎಂ. ನಂದೀಶ ಅವರು ಸರ್ವೆ ಮಾಡಿಸಿ ಒತ್ತುವರಿ ತೆರವುಗೊಳಿಸುತ್ತೇನೆ ಎಂದು ತಿಳಿಸಿದರು.

ಯಾವ ಗ್ರಾಮಗಳಲ್ಲಿ ಸ್ಮಶಾನದ ಜಾಗವಿಲ್ಲವೋ ಅಲ್ಲಲ್ಲಿ ಸ್ಮಶಾನಕ್ಕೆ ಜಾಗ ಮಂಜೂರು ಮಾಡುವುದಾಗಿ ತಿಳಿಸಿದರು. ಕಂಚಿಕೇರಿಯಲ್ಲಿ ಗ್ರಾಮ ಲೆಕ್ಕಿಗ ಕೇಂದ್ರ ಸ್ಥಾನದಲ್ಲಿರದೆ ಕರ್ತವ್ಯ ನಿರ್ಲಕ್ಷ್ಯ ಮಾಡುತ್ತಿದ್ದಾನೆ ಕ್ರಮ ಕೈಗೊಳ್ಳಿ ಎಂದು ಈರಣ್ಣ ಒತ್ತಾಯಿಸಿದರು.

ಮತದಾರರ ಪಟ್ಟಿಯನ್ನು ಕ್ರಮಬದ್ಧವಾಗಿ ಸರಿಪಡಿಸಿ ಎಂದು ಚಿಗಟೇರಿ ಬಸವನಗೌಡ ಅವರು ಒತ್ತಾಯಿಸಿದರು ತಾ.ಪಂ ಅಧ್ಯಕ್ಷೆ ಅನ್ನಪೂರ್ಣಮ್ಮ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಮಂಜನಾಯ್ಕ, ಇಓ ಈಶ್ವರಪ್ರಸಾದ್, ಯೋಜನಾಧಿಕಾರಿ ವಿಜಯಕುಮಾರ್ ಉಪಸ್ಥಿತರಿದ್ದರು.

---



## ಉಭಯ ಶ್ರೀಗಳಿಗೆ ಸಾಧು ಲಿಂಗಾಯತ ಸಮಾಜದ ಯುವಕರಿಂದ ಸ್ವಾಗತ

2ಎ ಮೀಸಲಾತಿ ನೀಡುವಂತೆ ಒತ್ತಾಯಿಸಿ ಕೂಡಲ ಸಂಗಮದ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮತ್ತು ಹರಿಹರದ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಶನಿವಾರ ಸಂಜೆ ದಾವಣಗೆರೆ ಪ್ರವೇಶಿಸಿದ ಸಂದರ್ಭದಲ್ಲಿ ಸಾಧು ಲಿಂಗಾಯತ ಸಮಾಜದ ಯುವ ಮುಖಂಡರಾದ ಶಶಿಧರ ಹೆಮ್ಮನಬೇತೂರು ಅವರು ಉಭಯ ಶ್ರೀಗಳಿಗೆ ಪುಷ್ಪಮಾಲೆಯೊಂದಿಗೆ ಎಳನೀರು ನೀಡುವುದರ ಮೂಲಕ ಸ್ವಾಗತಿಸಿದರು.ಸತೀಶ್ ಸಿರಿಗೆರೆ, ಕುಮಾರ್ ಮೆಳ್ಳೇಕಟ್ಟೆ, ಕೊರಟಿಗೆರೆ ಶಿವಕುಮಾರ್, ಪ್ರಭು ಕಾವಲಹಳ್ಳಿ, ಸಂತೋಷ್ ಸಿರಿಗೆರೆ ಮತ್ತಿತರರು ಶ್ರೀಗಳನ್ನು ಬರ ಮಾಡಿಕೊಂಡರು.

---

## ಮೇ 24 ರಿಂದ ದ್ವಿತೀಯ ಪಿಯುಸಿ ಪರೀಕ್ಷೆ

ದಾವಣಗೆರೆ, ಜ.29- ಪದವಿ ಪೂರ್ವ ಶಿಕ್ಷಣ ಇಲಾಖೆ ಆದೇಶದನ್ವಯ ಮೇ 24 ರಿಂದ ಜೂನ್ 10ರ ವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ ನಡೆಯಲಿದ್ದು, ಈ ಸಂಬಂಧ ತಾತ್ಕಾಲಿಕ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ಮೇ 24 (ಇತಿಹಾಸ, ಭೌತಶಾಸ್ತ್ರ), ಮೇ 25 (ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಅರೇಬಿಕ್, ಫ್ರೆಂಚ್), ಮೇ 26 (ತರ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹ ವಿಜ್ಞಾನ, ಬೇಸಿಕ್ ಮ್ಯಾಥ್ಸ್) ಮೇ 27 (ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಗಣಿತ), ಮೇ 28 (ಉರ್ದು, ಸಂಸ್ಕೃತ), ಮೇ 29 (ರಾಜ್ಯಶಾಸ್ತ್ರ), ಮೇ 31 (ವ್ಯವಹಾರ ಅಧ್ಯಯನ, ರಸಾಯನಶಾಸ್ತ್ರ, ಶಿಕ್ಷಣ), ಜೂ. 1 (ಕರ್ನಾಟಕ ಸಂಗೀತ-ಹಿಂದೂಸ್ತಾನಿ ಸಂಗೀತ), ಜೂ. 2 (ಮನಃಶಾಸ್ತ್ರ, ಜೀವಶಾಸ್ತ್ರ, ಎಲೆಕ್ಟ್ರಾನಿಕ್ಸ್, ಗಣಕ ವಿಜ್ಞಾನ), ಜೂ. 3 (ಹಿಂದಿ), ಜೂ. 4 (ಅರ್ಥಶಾಸ್ತ್ರ), ಜೂ. 5 (ಕನ್ನಡ), ಜೂ. 7 (ಇಂಗ್ಲಿಷ್), ಜೂ. 8 (ಮಾಹಿತಿ ತಂತ್ರಜ್ಞಾನ, ರೀಟೈಲ್ ಆಟೋಮೊಬೈಲ್, ಹೆಲ್ತ್ ಕೇರ್, ಬ್ಯೂಟಿ ಮತ್ತು ವೆಲ್‌ನೆಸ್), ಜೂ 9 (ಸಮಾಜಶಾಸ್ತ್ರ, ಸಂಖ್ಯಾಶಾಸ್ತ್ರ), ಜೂ. 10 (ಭೂಗೋಳ ಶಾಸ್ತ್ರ).

---

## ಕುರಿಗಾಹಿ ಮಹಿಳೆಗೆ ಒಲಿದ ಗ್ರಾ.ಪಂ. ಅಧ್ಯಕ್ಷ ಪಟ್ಟ



ಜಗಳೂರು

ಜಗಳೂರು, ಜ.29- ತಾಲ್ಲೂಕಿನ ಹಿರೇಮಲ್ಲನ ಹೊಳೆ ಗ್ರಾಮ ಪಂಚಾಯಿತಿಯ ಕುರಿಗಾಹಿ ಬುಡಕಟ್ಟು ಸಮುದಾಯದ ಶಿವರುದ್ರಮ್ಮ ಅವರಿಗೆ ಗ್ರಾಪಂ ಅಧ್ಯಕ್ಷ ಪಟ್ಟ ಅವಿರೋಧವಾಗಿ ಒಲಿದು ಬಂದಿದೆ.


ಚಿಕ್ಕಮಲ್ಲನಹೊಳೆ ಗೊಲ್ಲರ ಹಟ್ಟಿ ಪರಿಶಿಷ್ಟ ಪಂಗಡ ಮಹಿಳಾ ಕ್ಷೇತ್ರದಿಂದ ಶಿವರುದ್ರಮ್ಮ ಅವರು ಅವಿರೋಧವಾಗಿ ಆಯ್ಕೆಯಾಗಿದ್ದರು, ಅಧ್ಯಕ್ಷ ಸ್ಥಾನ ಎಸ್.ಟಿ ಗೆ ಮೀಸಲು ಬಂದಿದ್ದರಿಂದಾಗಿ ಪಂಚಾಯ್ತಿಯ ಒಟ್ಟು 20 ಸ್ಥಾನಗಳಲ್ಲಿ ಏಕೈಕ ಪರಿಶಿಷ್ಟ ಪಂಗಡ ಮಹಿಳೆಯಾಗಿರುವ ಶಿವರುದ್ರಮ್ಮ ಅವಿರೋಧವಾಗಿ ಅಧ್ಯಕ್ಷೆಯಾಗಲಿದ್ದಾರೆ.

ಮೂಲತಃ ಬುಡಕಟ್ಟು ಸಮಾಜದ ಮಹಿಳೆಯಾಗಿರುವ ಶಿವರುದ್ರಮ್ಮ ವೃತ್ತಿಯಲ್ಲಿ ತಮ್ಮ ಬುಡಕಟ್ಟು ಸಮುದಾಯದ ಮೂಲ ಕಸುಬಾದ ಕುರಿಗಾಹಿ ವೃತ್ತಿಯನ್ನು ನಿರ್ವಹಿಸುತ್ತಿದ್ದು, ಇಂದು ಹಿರೇಮಲ್ಲನಹೊಳೆ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷೆಯಾಗಲಿದ್ದಾರೆ.

ಹಿರೇಮಲ್ಲನಹೊಳೆ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷೆಯಾಗಲಿರುವ ಶಿವರುದ್ರಮ್ಮ ಮಹಾಂತೇಶ ಅವರನ್ನು ರಾಜ್ಯ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಎಸ್. ವಿ. ರಾಮಚಂದ್ರ ಅಭಿನಂದಿಸಿದ್ದಾರೆ.

---

## ರಾಜನಹಳ್ಳಿ: ಫೆ.8ಕ್ಕೆ ಸಾಮೂಹಿಕ ವಿವಾಹ



ಮಲೇಬೆನ್ನೂರು, ಜ.29 - ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಫೆಬ್ರವರಿ 8 ಮತ್ತು 9 ರಂದು ಹಮ್ಮಿಕೊಂಡಿರುವ 3ನೇ ವರ್ಷದ ವಾಲ್ಮೀಕಿ ಜಾತ್ರೆಯ ಅಂಗವಾಗಿ ಫೆಬ್ರವರಿ 8ರಂದು ಸಾಮೂಹಿಕ ವಿವಾಹ ಮಹೋತ್ಸವವನ್ನು ಶ್ರೀವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ.

ಸಾಮೂಹಿಕ ವಿವಾಹ ಆಗಲಿಚ್ಚಿಸುವವರು ಫೆ.6ರ ಒಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ರಾಜನಹಳ್ಳಿ ಮಠದಲ್ಲಿ ಹೆಸರು ನೋಂದಾಯಿಸುವಂತೆ ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ ವಾಲ್ಮೀಕಿ ಜಾತ್ರಾ ಸಮಿತಿ ಸಂಚಾಲಕ ಹೊದಿಗೆರೆ ರಮೇಶ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ **8792290513** ಗೆ ಸಂಪರ್ಕಿಸುವಂತೆ ಕೋರಲಾಗಿದೆ.

---

## ನಗರದಲ್ಲಿ ಇಂದು ಎ. ಮಹಲಿಂಗಪ್ಪ ಅವರ ಏಕವ್ಯಕ್ತಿ ಕಲಾ ಪ್ರದರ್ಶನ

ಹಿರಿಯ ಕಲಾವಿದ ಮಹಲಿಂಗಪ್ಪ ಅವರ ಏಕವ್ಯಕ್ತಿ ಕಲಾ ಪ್ರದರ್ಶನವನ್ನು ಇಂದು ಸಂಜೆ 5-30 ಕ್ಕೆ ಕಲಾ ಪರಿಷತ್ತಿನಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಪದ್ಮಾ ಬಸವಂತಪ್ಪ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿವಿ ಕುಲ ಸಚಿವ ಡಾ ಬಸವರಾಜ ಬಣಕಾರ್, ಡಾ. ರಾಜನಹಳ್ಳಿ ಎಲ್. ಉಮಾ ಶಂಕರ್ ಮತ್ತು ಕನ್ನಡ-ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಆಗಮಿಸುವರು. ಬದ್ರಿನಾಥ್ ಅಧ್ಯಕ್ಷತೆ ವಹಿಸುವರು.



ನಾಳೆ ಭಾನುವಾರ ಮುಂಜಾನೆ 11 ಗಂಟೆಗೆ ಹಾವೇರಿಯ ಹಿರಿಯ ಕಲಾವಿದ ಕರಿಯಪ್ಪ ಹಂಚಿನಮನಿ ಅವರಿಂದ ಪ್ರಾತ್ಯಕ್ಷಿಕೆ. ಸಿಂಡಿಕೇಟ್ ಮಾಜಿ ಸದಸ್ಯ ಪ್ರೊ. ಸಿ.ಹೆಚ್ ಮುರುಗೇಂದ್ರಪ್ಪ ಉದ್ಘಾಟಿಸುವರು. ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ರವೀಂದ್ರ ಕಮ್ಮಾರ್ ಅಧ್ಯಕ್ಷತೆ ವಹಿಸುವರು. ಇದೇ ಸಂದರ್ಭದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಬಿ.ಆರ್. ಕೊರತಿ ಅವರನ್ನು ಸನ್ಮಾನಿಸಲಾಗುವುದು.

## ಮಾಳನಾಯಕನಹಳ್ಳಿಯಲ್ಲಿ ಫೆ. 1 ರಂದು ಜಾತ್ರೆ

ರಾಣೇಬೆನ್ನೂರು, ಜ.29- ತಾಲ್ಲೂಕಿನ ಮಾಳನಾಯಕನಹಳ್ಳಿ ಗ್ರಾಮದ ಗ್ರಾಮದೇವತೆ ಶ್ರೀ ದುರ್ಗಾಂಬಿಕಾದೇವಿ ಜಾತ್ರೆಯು ಬರುವ ಫೆಬ್ರವರಿ 1 ಮತ್ತು 2 ರಂದು ನಡೆಯಲಿದೆ.

ಫೆಬ್ರವರಿ 1 ರ ಸೋಮವಾರ ರಾತ್ರಿ 8 ಗಂಟೆಗೆ ಡೊಳ್ಳು, ಬಾಜಾ, ಭಜನೆ, ಹಲಗೆ, ಕಹಳೆ, ವಾದ್ಯಗಳೊಂದಿಗೆ ಶ್ರೀ ದೇವಿಯ ಉತ್ಸವ ಗ್ರಾಮದ ಬೀದಿಗಳಲ್ಲಿ ಸಾಗುವುದು. ಫೆ. 2 ರ ಮಂಗಳವಾರ ಬೆಳಿಗ್ಗೆ 6 ಗಂಟೆಗೆ ದೇವಿಯು ಮಂದಿರಕ್ಕೆ ಪ್ರವೇಶ ಮಾಡುವಳು. 7 ಗಂಟೆಗೆ ದೇವಿಗೆ ಅಭಿಷೇಕಾಚರಣೆ ನಡೆಯುವವು. ಅಂದು ಮಧ್ಯಾಹ್ನ 3 ಗಂಟೆಗೆ ಗಂಗಾರತಿಯೊಂದಿಗೆ ದೇವಿಗೆ ಉಡಿ ತುಂಬುವ ಕಾರ್ಯಕ್ರಮ ಜರುಗುವುದು.

---

# ಅವೈಜ್ಞಾನಿಕ ತೆರಿಗೆ ನಿಯಮಗಳ ರದ್ಧತಿಗೆ ಆಗ್ರಹ

ದಾವಣಗೆರೆ, ಜ.29- ಜಿಎಸ್‌ಟಿ ನಿಯಮಗಳ ಹೊರೆಗೆ ತೆರಿಗೆ ವಲಯ ತತ್ತರಿಸಿದ್ದು, ಜಿಎಸ್‌ಟಿ ತೆರಿಗೆಯನ್ನು ಸರಳೀಕರಣಗೊಳಿಸಿ, ಅವೈಜ್ಞಾನಿಕ ತೆರಿಗೆ ನಿಯಮಗಳನ್ನು ರದ್ದುಪಡಿಸುವಂತೆ ಒತ್ತಾಯಿಸಿ ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ನೇತೃತ್ವದಲ್ಲಿ ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ಕೇಂದ್ರ ಸರ್ಕಾರದ ಜಿಎಸ್‌ಟಿ ಕಚೇರಿ ಮುಂಭಾಗದಲ್ಲಿ ತೆರಿಗೆ ಸಲಹೆಗಾರರು ಇಂದು ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರ 2017ರಲ್ಲಿ ಏಕರೂಪ ಸರಕು ಸೇವಾ ತೆರಿಗೆ ಕಾಯ್ದೆಯನ್ನು ರಾಷ್ಟ್ರವ್ಯಾಪಿ ಜಾರಿಗೆ ತಂದಾಗ ಮುಕ್ತಕಂಠದಿಂದ ಸ್ವಾಗತಿಸಿದ್ದ ಬಹುಪಾಲು ತೆರಿಗೆದಾರರು, ತೆರಿಗೆ ಸಲಹೆಗಾರರೇ ಇದೀಗ ತಿರಸ್ಕರಿಸುವಂತಾಗಿದೆ. ಜಿಎಸ್‌ಟಿ ಅಡಿ ದಿನಕ್ಕೊಂದು ನಿಯಮಗಳನ್ನು ತರುತ್ತಿರುವ ಹಿನ್ನೆಲೆಯಲ್ಲಿ ತೆರಿಗೆದಾರರುಮಾತ್ರವಲ್ಲದೇ ತೆರಿಗೆ ಸಲಹೆಗಾರರಿಗೆ ಈ ಕಾಯಿದೆ ಏನೆಂದು ಅರ್ಥವಾಗುತ್ತಿಲ್ಲ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.



ಇದೇ ಕಾರಣಕ್ಕೆ ಪಶ್ಚಿಮ ಮಹಾರಾಷ್ಟ್ರ ತೆರಿಗೆ ಸಮಾಲೋಚಕರ ಸಂಘ ಅಖಿಲ ಭಾರತ ಮಟ್ಟದ ಪ್ರತಿಭಟನೆಗೆ ಕರೆ ನೀಡಿದ್ದು, ಕರ್ನಾಟಕ ರಾಜ್ಯ ಸೇರಿದಂತೆ ದೇಶದ ವಿವಿಧೆಡೆಯ 130ಕ್ಕೂ ಅಧಿಕ ತೆರಿಗೆ ಸಮಾಲೋಚಕರು, ತೆರಿಗೆದಾರರ ಸಂಘಟನೆಗಳು ಬೆಂಬಲ ನೀಡಿ ಸಿಜಿಎಸ್‌ಟಿ ಕಛೇರಿ ಎದುರು ಪ್ರತಿಭಟನೆಗೆ ಮುಂದಾಗಿ ಹಣಕಾಸು ಸಚಿವರಿಗೆ ಮನವಿ ಸಲ್ಲಿಸಲು ನಿರ್ಧರಿಸಿವೆ ಎಂದು ಹೇಳಿದರು.

ರಾಜ್ಯ ಸರ್ಕಾರಗಳಿಗಿದ್ದ ಪರೋಕ್ಷ ತೆರಿಗೆ ಅವಕಾಶವನ್ನು ಕೇಂದ್ರ ಸರ್ಕಾರ ಹಿಂಪಡೆದು ಏಕರೂಪ ಜಿಎಸ್‌ಟಿ ಕಾನೂನನ್ನು ರಾಷ್ಟ್ರವ್ಯಾಪಿ ಜಾರಿಗೆ ತಂದಾಗ ತೆರಿಗೆ ವಿಧಾನ ಸರಾಗವಾಗಿ ತೆರಿಗೆ ಹೊರೆ ಇಳಿಯುತ್ತದೆಂದು ಭಾವಿಸಿದ್ದ ತೆರಿಗೆ ಸಲಹೆಗಾರರು ತೆರಿಗೆದಾರರು ಸದ್ಯ ಅವೈಜ್ಞಾನಿಕವಾಗಿ ಅನುಷ್ಠಾನಗೊಳ್ಳಲ್ಪಟ್ಟಿರುವ ಜಿಎಸ್‌ಟಿ ಸುಳಿಯಲ್ಲಿ ಸಿಲುಕಿ ಹೊರಬರಲಾರದೆ ತ್ರಿಶಂಕು ಸ್ಥಿತಿ ಎದುರಿಸುತ್ತಿದ್ದಾರೆ. ಇದರಿಂದ ಮಾನಸಿಕವಾಗಿ ಆರ್ಥಿಕವಾಗಿ ಹೊಡೆತ ಅನುಭವಿಸುವಂತಾಗಿದ್ದು, ವ್ಯಾಪಾರ ಹಾಗೂ ವೃತ್ತಿ ನಿರತರ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ರಾಷ್ಟ್ರದ ಪ್ರಗತಿ ಸೂಚ್ಯಂಕ ಮೈನಸ್ ಪ್ರತಿಶತಕ್ಕೆ ಇಳಿದಿರುವುದೇ ಜಿಎಸ್‌ಟಿಯ ಹೊಡೆತಕ್ಕೆ ಜ್ವಲಂತ ನಿದರ್ಶನವೆಂದು ವಿಶ್ಲೇಷಿಸಿದರು.

ಪ್ರತಿಭಟನೆಯಲ್ಲಿ ಸಂಘದ ಗೌರವಾಧ್ಯಕ್ಷ ಬಿ.ಜಿ. ಬಸವರಾಜಪ್ಪ, ಅಧ್ಯಕ್ಷ ಜಂಬಿಗಿ ರಾಧೇಶ್, ಉಪಾಧ್ಯಕ್ಷ ಹೆಚ್.ಎಸ್. ಮಂಜುನಾಥ್, ಕಾರ್ಯದರ್ಶಿ ಡಿ.ಎಂ. ರೇವಣಸಿದ್ದಯ್ಯ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

---

## ಕಾಸಲ್ ಶ್ರೇಷ್ಠಿ ಉದ್ಯಾನವನದ ನೀರಿನ ಟ್ಯಾಂಕ್ ಪುನರ್‌ನಿರ್ಮಾಣಕ್ಕೆ ಚಾಲನೆ



ದಾವಣಗೆರೆ, ಜ.29- ನಗರದ 38ನೇ ವಾರ್ಡಿನ ಎಂಸಿಸಿ 'ಬಿ' ಬ್ಲಾಕ್‌ನ ಹೆಸರಾಂತ ಕಾಸಲ್ ಶ್ರೇಷ್ಠಿ ಉದ್ಯಾನವನದಲ್ಲಿರುವ ನೀರಿನ ಟ್ಯಾಂಕ್ ಶಿಥಿಲಗೊಂಡಿದ್ದ ಕಾರಣ ಅದರ ಸ್ಥಳದಲ್ಲಿ ಹೊಸ ಟ್ಯಾಂಕ್‌ನ ಪುನರ್ ನಿರ್ಮಾಣ ಕಾರ್ಯಕ್ಕೆ ಪಾಲಿಕೆ ಸದಸ್ಯ ಜಿ.ಎಸ್.ಮಂಜುನಾಥ್ ಗಡಿಗುಡಾಳ್ ಅವರು ಚಾಲನೆ ನೀಡಿ, ಇದರ ಜಿ.ಎಲ್.ಆರ್ (ಗ್ರೌಂಡ್ ಲೆವೆಲ್ ರಿಸರ್‌ವಯರ್) ಕಾಂಕ್ರೀಟ್ ಕಾಮಗಾರಿಯನ್ನು ಪರಿಶೀಲಿಸಿದರು.

ಸೂಯೇಜ್ ಕಂಪನಿಯ ವತಿಯಿಂದ ನಿರ್ಮಾಣ ನಡೆಯುತ್ತಿದ್ದು, ಈ ಸಂದರ್ಭದಲ್ಲಿ ಎಇಇ ಅಣಜಿ ನಾಗರಾಜಪ್ಪ, ಎಇ ಸಚಿನ್ ಚಕ್ರವರ್ತಿ, ಪಿಎಂ ಸಚಿತ್ ಆಂತೋನಿ ಇವರುಗಳು ಸ್ಥಳದಲ್ಲಿ ಉಪಸ್ಥಿತರಿದ್ದರು. ಮಹಾನಗರ ಪಾಲಿಕೆ ಸಹಾಯಕ ಇಂಜಿನಿಯರ್ ಮಧುಸೂದನ್ ಅವರೂ ಸಹ ಕಾಮಗಾರಿಯನ್ನು ವೀಕ್ಷಿಸಿದರು.

---


## ಭಾವಪೂರ್ಣ ಶ್ರದ್ಧಾಂಜಲಿ



ದಿ : 28-1-21ರಂದು ನಿಧನರಾದ ಆತ್ಮೀಯರಾದ

**ಶ್ರೀ ವೀರಸಂಗಪ್ಪ ಗೌಡ್ರು (ರಾಜು)**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಎಂ.ಎಸ್. ಮಹೇಶ್ವರಯ್ಯ ಮತ್ತು ಮಕ್ಕಳು**

**ಎ.ಪಿ.ಎಂ.ಸಿ. ಎ.ಪಿ.ಎಂ.ಸಿ, ಯಾರ್ಡ್ 'ಬಿ' ಬ್ಲಾಕ್, ದಾವಣಗೆರೆ.**


**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte